# 1:9-14

# ಕೊಲೊಸ್ಸೆಯವರಿಗಾಗಿ ಪೌಲನ ಪ್ರಾರ್ಥನೆ

ಅವರು ಹೊಂದಿಕೊಂಡಿದ್ದ ಆಶೀರ್ವಾದಗಳ ನಿಮಿತ್ತವಾಗಿ ತಾನು ಸ್ತೋತ್ರಾರ್ಪಣೆಯ ಪ್ರಾರ್ಥನೆಗಳನ್ನು ಅರ್ಪಿಸಿದನೆಂಬದಾಗಿ ಪೌಲನು ಕೊಲೊಸ್ಸೆಯವರಿಗೆ ಭರವಸೆ ನೀಡುತ್ತಾನೆ (1:3-8). 9ರಿಂದ 14 ವಚನಗಳಲ್ಲಿ, ಆತ್ಮೀಕ ಗ್ರಹಿಕೆಗಾಗಿ ಮತ್ತು ಸತ್ಕಾರ್ಯಗಳ ಮೂಲಕ ಫಲಕೊಡುವಿಕೆಗಾಗಿ ಪ್ರಾರ್ಥನೆ ಮಾಡುತ್ತಾನೆ. ಆತನು ಅಂಥ ಮನವಿಯನ್ನು ಮಾಡುವ ಉದ್ದೇಶವೇನೆಂದರೆ, ಅವರು ಬಲಗೊಂಡವರಾಗಿ, ಅವರನ್ನು ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವಂತೆ ಯೋಗ್ಯರನ್ನಾಗಿಸಿದ ದೇವರ ಸೇವೆಯನ್ನು ತಾಳ್ಮೆಯಿಂದ ಮತ್ತು ಆನಂದಪೂರ್ವಕವಾಗಿ ಮಾಡುವಂಥವರಾಗಬೇಕೆಂಬುದೆ (ವಚನಗಳು 11, 12). ಅವರು ಕತ್ತಲೆಯ ಆಧಿಪತ್ಯದೊಳಗಿಂದ ಬಿಡಿಸಲ್ಪಟ್ಟು ಯೇಸುವಿನ ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದರು, ಆತನಲ್ಲಿಯೇ ಅವರು ಬಿಡುಗಡೆಗೊಂಡಿದ್ದರು ಮತ್ತು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಹೊಂದಿದ್ದರು.

## ಅವರ ತಿಳುವಳಿಕೆ ಮತ್ತು ಆತ್ಮೀಕ ಜ್ಞಾನ (1:9)

**9ಆದಕಾರಣ ನಾವು ನಿಮ್ಮ ಸುದ್ದಿಯನ್ನು ಕೇಳಿದ ದಿವಸದಿಂದ ನಿಮಗೋಸ್ಕರ ಪ್ರಾರ್ಥಿಸುವದನ್ನು ಬಿಡದೆ ನೀವು ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಹೊಂದಿ ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು.**

### "ಆದಕಾರಣ ನಾವು ನಿಮ್ಮ ಸುದ್ದಿಯನ್ನು ಕೇಳಿದ ದಿವಸದಿಂದ ನಿಮಗೋಸ್ಕರ ಪ್ರಾರ್ಥಿಸುವದನ್ನು ಬಿಡದೆ"

ಕೊಲೊಸ್ಸೆಯವರ ನಂಬಿಕೆ, ನಿರೀಕ್ಷೆ, ಮತ್ತು ಪ್ರೀತಿಯ ಕುರಿತಾಗಿ ಎಪಫ್ರನಿಂದ ವರದಿಯನ್ನು ಸ್ವೀಕರಿಸಿದ ದಿಸವದಿಂದ ಪೌಲ ಮತ್ತು ಆತನ ಸಂಗಡಿಗರು ಅವರಿಗಾಗಿ ಪ್ರಾರ್ಥಿಸುವದನ್ನು ಬಿಟ್ಟಿರಲಿಲ್ಲ (1:3-8). William Hendriksen ಹೀಗೆ ಬರೆದನು, "[ಈ ಗುಣಗಳನ್ನೆಲ್ಲಾ] ಒಂದುಗೂಡಿಸುವದಾದರೆ ನಾವು ಗಮನಿಸುವದೇನೆಂದರೆ ಸಂಬೋಧಿಸಲ್ಪಟ್ಟವರು ಜ್ಞಾನ, ಗ್ರಹಿಕೆ, ಬಲ, ತಾಳ್ಮೆ, ದೀರ್ಘಶಾಂತಿ, ಆನಂದ, ಕೃತಜ್ಞತಾಭಾವನೆ, ಮತ್ತು ಪ್ರೀತಿಯಂತಹ ವಿಷಯಗಳಲ್ಲಿ ಅಭಿವೃದ್ಧಿಗೊಳ್ಳಬೇಕೆಂದು ಅಪೊಸ್ತಲನು ಪ್ರಾರ್ಥಿಸುತ್ತಾನೆ."[1]

ಈ ವಿಭಾಗದಲ್ಲಿ ಪೌಲನು ಸಹೋದರರಿಗಾಗಿ ಮಾಡಿದ ಪ್ರಾರ್ಥನೆಗಳಲ್ಲಿದ್ದ ಅಂಶಗಳನ್ನು ಅವರಿಗೆ ತಿಳಿಯಪಡಿಸುತ್ತಾನೆ, ಅದರಲ್ಲಿ ಅಲ್ಲಿರುವ ಸಭೆಯು ಇನ್ನಷ್ಟು ಹೆಚ್ಚಾಗಿ ಬೆಳೆಯುವಂತಾಗಬೇಕೆಂದು ದೇವರನ್ನು ಬೇಡಿಕೊಳ್ಳುವದು ಸೇರಿರುತ್ತದೆ. ಕ್ರೈಸ್ತರು ತಮ್ಮ ಜೊತೆಯ ಕ್ರೈಸ್ತರಿಗಾಗಿ ಪ್ರಾರ್ಥಿಸುವಾಗ ಅಂತಹ ಮನವಿಗಳನ್ನು ಸೇರಿಸಿಕೊಳ್ಳುವ ಮೂಲಕ ಅದನ್ನು ಅನುಕರಣೆ ಮಾಡತಕ್ಕದ್ದು. (**ಪ್ರಾರ್ಥಿಸುವದನ್ನು ಬಿಡದೆ** ಎಂಬ ಪದಗುಚ್ಛದ ವಿಷಯದಲ್ಲಿ, 1:3ರ ಮೇಲಿನ ಚರ್ಚೆಯನ್ನು ನೋಡಿರಿ.)

ಪೌಲನು ತನ್ನ ಪ್ರಾರ್ಥನೆಯಲ್ಲಿ ಕೊಲೊಸ್ಸೆಯವರನ್ನು ಸೇರ್ಪಡೆಗೊಳಿಸಿಕೊಂಡದ್ದು ಮಾತ್ರವಲ್ಲದೆ, ಆತನು ಇನ್ನು ಅನೇಕ ಸಭೆಗಳಿಗಾಗಿ ಮತ್ತು ಕ್ರೈಸ್ತರಿಗಾಗಿ ಪ್ರಾರ್ಥಿಸಿದನೆಂಬುದನ್ನು ಆತನ ಪತ್ರಿಕೆಗಳು ಸ್ಪಷ್ಟಗೊಳಿಸುತ್ತವೆ.[2] ಆತನು ಬೇರೆವರಿಗಾಗಿ ಪ್ರಾರ್ಥಿಸುವಾಗ, ಕೊಲೊಸ್ಸೆಯವರು (4:3, 4) ಮತ್ತು ಇತರರನ್ನು ತನಗೋಸ್ಕರ ಪ್ರಾರ್ಥಿಸುವಂತೆ ಕೇಳಿಕೊಂಡನು.[3]

9ರಿಂದ 14 ವಚನಗಳಲ್ಲಿ ಹೇಳಿಕೆಗಳು ಪ್ರಾರ್ಥನೆಗಳನ್ನು ಸಲ್ಲಿಸುವವರ ಕೆಲವು ವೈಯಕ್ತಿಕ ಗುಣಸ್ವಭಾವಗಳನ್ನು ಬಯಲುಗೊಳಿಸುತ್ತವೆ: (1) ಪ್ರಾರ್ಥನೆಗಳಿಗೆ ಉತ್ತರಿಸುತ್ತಾನೆಂದು ದೇವರಲ್ಲಿ ನಂಬಿಕೆ; (2) ಪ್ರಾರ್ಥನೆಗಳಿಗೆ ಉತ್ತರಿಸಲು ಆತನಿಗಿರುವ ಸಾಮರ್ಥ್ಯದಲ್ಲಿ ಭರವಸೆ; (3) ಆತನೊಂದಿಗೆ ಒಂದು ಆಪ್ತವಾದ ಸಂಬಂಧ; (4) ಇತರರಿಗೋಸ್ಕರ ಆಸಕ್ತಿ, ಕಾಳಜಿ, ಮತ್ತು ಪ್ರೀತಿ; (5) ಪ್ರಾರ್ಥನೆಯಲ್ಲಿ ನಿರಂತರವಾದ ತೊಡಗಿಸಿಕೊಳ್ಳುವಿಕೆ; (6) ವಿಜ್ಞಾಪನೆಗಳಲ್ಲಿ ನಿಷ್ಕೃಷ್ಟತೆ; (7) ಒಂದು ಸಕಾರಾತ್ಮಕ ಮನೋಭಾವ; (8) ಸಂಭಾವ್ಯವಾದ ಮುಂದುವರೆಯುವ ಆತ್ಮೀಕ ಬೆಳವಣಿಗೆಯಲ್ಲಿ ನಂಬಿಕೆ; (9) ಆತ್ಮೀಕ ಅಗತ್ಯತೆಗಳಿಗಾಗಿ ಕಳಕಳಿ (10) ಆತ್ಮದ ಮೂಲಭೂತ ಅಗತ್ಯತೆಗಳ ಬಗ್ಗೆ ಪರಿಜ್ಞಾನ.

ಕೊಲೊಸ್ಸೆಯವರಿಗಾಗಿ ಮಾಡಿದ ತಮ್ಮ ಪ್ರಾರ್ಥನೆಗಳಲ್ಲಿ, ಪೌಲ ಮತ್ತು ಆತನ ಸಂಗಡಿಗರು ಮನವಿಗಳನ್ನು ಮಾಡಿದರು. ಮೊದಲನೆಯದಾಗಿ, ಅವರು ಈ ಸಹೋದರರು "ಜ್ಞಾನವನ್ನೂ . . . ," "ಗ್ರಹಿಕೆಯನ್ನೂ ಹೊಂದಿ," ಮತ್ತು "ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು" ಆತ್ಮೀಯ ಅಂತರ್ದೃಷ್ಟಿಯನ್ನು ಹೊಂದುವವರಾಗಬೇಕೆಂದು ಪ್ರಾರ್ಥಿಸಿದರು (ವ. 9). ಎರಡನೆಯದಾಗಿ, ಅವರು ಯೋಗ್ಯರಾಗಿ ನಡೆದು, ದೇವರಿಗೆ ಸಂತೋಷವನ್ನುಂಟು ಮಾಡುವಂತಹ ಮತ್ತು ಫಲ ಕೊಡುವವರನ್ನಾಗಿ ಮಾಡುವಂತಹ ರೀತಿಯಲ್ಲಿ ಜೀವಿಸುವವರಾಗಬೇಕೆಂದು ಪ್ರಾರ್ಥಿಸಿದರು (ವ.10). ಮೂರನೆಯದಾಗಿ, ಅವರು ಕೊಲೊಸ್ಸೆಯವರನ್ನು ಆತನ ಮಹಿಮಾಶಕ್ತಿಯ ಪ್ರಕಾರ ಆತ್ಮೀಕ ಬಲದಿಂದ ತುಂಬಿಸಬೇಕೆಂದು ಪ್ರಾರ್ಥಿಸಿದರು (ವ. 11). ನಾಲ್ಕನೆಯದಾಗಿ, ಅವರು ತಮ್ಮ ಸಹೋದರರು ಕೃತಜ್ಞತೆಯುಳ್ಳ ಆನಂದವನ್ನು ಅನುಭವಿಸುವವರಾಗಬೇಕೆಂದು ಪ್ರಾರ್ಥಿಸಿದರು (ವಚನಗಳು 11, 12). ಈ ನಾಲ್ಕು ಮನವಿಗಳ ಕುರಿತು ಇನ್ನಷ್ಟು ಸೂಕ್ಷ್ಮವಾಗಿ ನೋಡೋಣ.

## "ನೀವು ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಹೊಂದಿ ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು"

ಈ ಸಹೋದರರು ಕರ್ತನ ಚಿತ್ತದ . . . **ತುಂಬಿಕೊಂಡು** [πληρόω, *plēroō*]

ಇರಬೇಕೆಂದು ಅಪೊಸ್ತಲನು ಬಯಸಿದ್ದನು. ಪ್ರವಾದನೆಯ ನೆರವೇರುವಿಕೆಯನ್ನು ವ್ಯಕ್ತಪಡಿಸಲು (ಮತ್ತಾಯ 1:22; 2:15), ಕಾಲವೊಂದು ಗತಿಸಿ ಹೋದದ್ದನ್ನು ತಿಳಿಸಲು (ಮಾರ್ಕ 1:15), ಮತ್ತು ಒಂದು ಚಟುವಟಿಕೆ ಅಥವಾ ವಹಿಸಲ್ಪಟ್ಟ ಕೆಲಸ ಪೂರ್ತಿಗೊಳ್ಳುವದನ್ನು ತಿಳಿಸಲು (ಮತ್ತಾಯ 13:48; ಯೋಹಾನ 7:8) *plēroō*ದ ವಿವಿಧ ರೂಪಗಳು ಬಳಸಲ್ಪಟ್ಟಿವೆ. ಈ ಪದದ ಅರ್ಥವು ಜ್ಞಾನ, ತಿಳುವಳಿಕೆ, ಆನಂದ, ಅಥವಾ ಸಂಕಷ್ಟದಂತಹ ಒಂದು ನಿರ್ದಿಷ್ಟ ಗುಣದಿಂದ ತುಂಬಿಸಲ್ಪಡುವದು ಎಂದು ಸಹ ಆಗಿರುತ್ತದೆ.[4]

ಕೊಲೊಸ್ಸೆಯವರು ದೇವರ ಚಿತ್ತದ ಕುರಿತ ತಿಳುವಳಿಕೆ ಮತ್ತು ಆತ್ಮೀಕ ಜ್ಞಾನಗಳು ಪೂರ್ಣವಾಗಿ ಅನುಗ್ರಹಿಸಲ್ಪಟ್ಟವರಾಗಿ ಆತನ ಚಿತ್ತದಿಂದ ಸಂಪೂರ್ಣವಾಗಿ ತುಂಬಿದವರಾಗಿರಬೇಕೆಂದು ಪೌಲನು ಪ್ರಾರ್ಥಿಸಿದನು. ಅವರು ಸಂಪೂರ್ಣವಾದ ಆತ್ಮೀಕ ಜ್ಞಾನ, ಆತನ ಚಿತ್ತದ ವಿಷಯವಾದ ಒಂದು ಪೂರ್ಣವಾದ ತಿಳುವಳಿಕೆಯಿಂದ ಭರಿತರಾಗಿರಬೇಕೆಂದು ಬಯಸಿದನು. ಸರಿಯಾದ ಜ್ಞಾನವಿಲ್ಲದೆ ದೇವರ ಸೇವೆಯನ್ನು ಮಾಡಲು ಸಾಧ್ಯವಿಲ್ಲ (ರೋಮಾ 10:1–3).

**ತಿಳುವಳಿಕೆ** ಎಂಬುದಕ್ಕಾಗಿರುವ ಗ್ರೀಕ್ ಪದವು ἐπίγνωσις (*epignōsis*), ಇದರರ್ಥವು ಬೋಧಿಸಲ್ಪಟ್ಟದ್ದನ್ನು ಅರ್ಥಮಾಡಿಕೊಂಡವರಾಗಿ ಮತ್ತು ಅಭ್ಯಾಸ ಮಾಡಿದವರಾದ ಮೇಲೆ ನಿಖರವಾಗಿ, ಸಂಪೂರ್ಣವಾಗಿ, ಮತ್ತು ಆಮೂಲಾಗ್ರವಾಗಿ ತಿಳುಕೊಳ್ಳುವದು ಎಂದಾಗಿರುತ್ತದೆ (ನೋಡಿರಿ ವ. 6). ಅದು *gnōsis* ಗಿಂತಲೂ (2:3) ಹೆಚ್ಚು ಪೂರ್ಣವಾದ ಜ್ಞಾನ ಎಂದರ್ಥವನ್ನು ಕೊಡುತ್ತದೆ, ಅದು ಒಂದನ್ನು ಬುದ್ಧಿಯಿಂದ ಗ್ರಹಿಸಿಕೊಳ್ಳುವದು ಎಂದಾಗಿರುತ್ತದೆ. ಈ ಪದವು ಅಸ್ಪಷ್ಟವಾದ ದೇವಶಾಸ್ತ್ರೀಕ ಮಾಹಿತಿ ಎಂದು ಸೂಚಿಸುವದಿಲ್ಲ, ಆದರೆ ಕಲಿಯಲ್ಪಟ್ಟ, ಅರ್ಥಮಾಡಿಕೊಳ್ಳಲ್ಪಟ್ಟ, ಮತ್ತು ಅನುಭವ ಮಾಡಲ್ಪಟ್ಟ ಒಂದು ದೃಢವಾದ ಭಾವನೆಯನ್ನು ಗ್ರಹಿಸಿಕೊಳ್ಳುವದನ್ನು ಸೂಚಿಸುತ್ತದೆ. ಬೈಬಲ್ ಆಲೋಚನೆಗೆ ಸಂಬಂಧ ಪಡಿಸುವಾಗ, ಅದು ಯೇಸುವಿನ ಬೋಧನೆಯ ಪ್ರಕಾರ ಜೀವಿಸುವದರ ಮೂಲಕ ದೇವರ ಚಿತ್ತದ ಅರ್ಥವೇನೆಂಬುದರ ಆಳವಾದ ಪರಿಜ್ಞಾನ ಹೊಂದುವದು ಎಂಬ ಅರ್ಥವಾಗಿರುತ್ತದೆ (ನೋಡಿರಿ ಇಬ್ರಿಯ 5:14).

ಯೆಹೋವನ ಭಯವೇ ಜ್ಞಾನಕ್ಕೆ ಮೂಲ ಎಂದು ಸೊಲೊಮೋನನು ಬರೆದನು (ಜ್ಞಾನೋಕ್ತಿ 1:7; ನೋಡಿರಿ 9:10). ಜ್ಞಾನವು ಮಾಹಿತಿಯ ಮೂಲಕ ಬರುತ್ತದೆ, ಅದು ಬೋಧನೆಯ ಮೂಲಕವಾಗಿರಬಹುದು, ಗಮನಿಸುವದರ ಮೂಲಕ, ಅಥವಾ ಅನುಭವ ಮಾಡುವ ಮೂಲಕ ಆಗಿರಬಹುದಾಗಿದೆ. ತಿಳಿವಳಿಕೆಯು ಜ್ಞಾನದ ಬಳಕೆಯ ಮೂಲಕ ದೊರಕಿಸಿಕೊಂಡ ಪರಿಜ್ಞಾನದ ಫಲಿತವಾಗಿರುತ್ತದೆ. ಒಬ್ಬನು ತನ್ನ ಮನಸ್ಸಿನಲ್ಲಿರುವದನ್ನು ಅರ್ಥಮಾಡಿಕೊಳ್ಳತಕ್ಕ ಮಾತುಗಳಲ್ಲಿ ಪ್ರಕಟಗೊಳಿಸುವಾಗ ಮತ್ತೊಬ್ಬನಿಗೆ ಜ್ಞಾನವನ್ನು ಕೊಡಲ್ಪಡುತ್ತದೆ. ದೇವರು ತನ್ನ ಆಲೋಚನೆಗಳನ್ನು ಪವಿತ್ರಾತ್ಮನ ಮೂಲಕ ಅಪೊಸ್ತಲರಿಗೂ ಪ್ರವಾದಿಗಳಿಗೂ ಪ್ರಕಟಗೊಳಿಸಿದ್ದಾನೆ (ಎಫೆಸ 3:3–5).

ಪೌಲ ಮತ್ತು ಆತನ ಸಂಗಡಿಗರು ಕೊಲೊಸ್ಸೆಯವರಿಗೆ **ಆತ್ಮೀಯ ಜ್ಞಾನ** πνευματική σοφία (*pneumatikē sophia*) ಮತ್ತು ತಿಳುವಳಿಕೆ σύνεσις (*sunesis*) ದೊರಕುವಂತೆ ಸಹ ಪ್ರಾರ್ಥಿಸಿದರು. ಈ ಗುಣಗಳು ಶಾಸ್ತ್ರಗಳಲ್ಲಿ ಅನೇಕ ಸಾರಿ ಒಟ್ಟಿಗೆ

ಉಲ್ಲೇಖಿಸಲ್ಪಟ್ಟಿರುತ್ತವೆ (ನೋಡಿರಿ ವಿಮೋಚನಕಾಂಡ 31:3; 35:31; ಧರ್ಮೋಪದೇಶಕಾಂಡ 4:6; 2 ಪೂರ್ವಕಾಲವೃತ್ತಾಂತ 1:10, 12) ಮತ್ತು ಜ್ಞಾನೋಕ್ತಿಗಳಲ್ಲಿ ಘನವಾಗಿ ಶ್ಲಾಘಿಸಲ್ಪಟ್ಟಿರುತ್ತವೆ (ನೋಡಿರಿ 1:2; 2:2, 6; 3:13; 4:5, 7).

ಜ್ಞಾನದ ಆಧಾರ ಮಾಡಿಕೊಂಡು ಒಂದು ಪೂರ್ಣವಾದ ವಿವೇಚಿಸುವಿಕೆಯ ಗುಣವನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಸಾಮರ್ಥ್ಯವೇ "ತಿಳುವಳಿಕೆ" ಆಗಿರುತ್ತದೆ. ಪೌಲನು ತನ್ನ ಪತ್ರಿಕೆಯಲ್ಲಿ ಬೇರೊಂದು ಕಡೆ "ತಿಳುವಳಿಕೆ"ಯನ್ನು ಸೇರ್ಪಡೆಗೊಳಿಸಿರುತ್ತಾನೆ (1:28; 2:3; 3:16; 4:5). ವಾಸ್ತವಾಂಶಗಳನ್ನು ಬುದ್ಧಿಯಿಂದ ತಿಳಿದಿರುವದು ಅವಶ್ಯಕವಾಗಿ ತಿಳುವಳಿಕೆ ಎಂದು ಅರ್ಥವನ್ನು ಕೊಡುವದಿಲ್ಲ. ವಾಸ್ತವಾಂಶಗಳ "ಜ್ಞಾನ"ದ ಜೊತೆಗೆ ಪ್ರಯೋಜನವಾಗಬೇಕೆಂದರೆ ಆತ್ಮೀಕ ತಿಳುವಳಿಕೆ ಮತ್ತು ಗ್ರಹಿಕೆಗಳು ಇರತಕ್ಕದ್ದು. ಕಾರ್ಯರೂಪದ್ದು ಮತ್ತು ಆತ್ಮೀಕ ಪರಿಜ್ಞಾನದಿಂದ ಕೂಡಿದ್ದಲ್ಲದ ಜ್ಞಾನವನ್ನು ದೇವರು ಅಪೇಕ್ಷಿಸುವದಿಲ್ಲ. ಮಾನವ ಮೂಲವೊಂದರಿಂದ ದೊರೆತ ಜ್ಞಾನ ಮತ್ತು ತಿಳುವಳಿಕೆಯಂತಲ್ಲದೆ ಆತನ ಪ್ರಕಟನೆಯು ಆತ್ಮೀಕವಾದದ್ದಾಗಿದೆ (1 ಕೊರಿಂಥ 2:13). ಲೋಕದ ಜ್ಞಾನ (ಅಥವಾ ತತ್ವಜ್ಞಾನ) ವು ದೇವರ ದೃಷ್ಟಿಯಲ್ಲಿ ಮೂರ್ಖತನವಾಗಿದೆ (1 ಕೊರಿಂಥ 1:20). ಶಾರೀರಿಕ ಸಂಗತಿಗಳ ಜ್ಞಾನಕ್ಕಿಂತಲೂ ಅಧಿಕವಾದದ್ದನ್ನು ಕೊಲೊಸ್ಸೆಯವರು ಹೊಂದಿಕೊಳ್ಳಬೇಕೆಂದು ಪೌಲನು ಬಯಸಿದನು. ಅವರು ಆತ್ಮೀಕ ಪರಿಜ್ಞಾನವನ್ನು ಗಳಿಸಿಕೊಳ್ಳಬೇಕೆಂಬದು ಆತನ ಕಾಳಜಿಯಾಗಿತ್ತು.

ದೈವಿಕ ಜ್ಞಾನವು ದೇವರ ಪ್ರಕಟನೆಯ ಮೂಲಕ ಬರುತ್ತದೆ, ಅದು ಬೈಬಲ್‌ನಲ್ಲಿ ಸಿಕ್ಕುತ್ತದೆ. ನಮ್ಮ ಪ್ರಾರ್ಥನೆಯ ಮೂಲಕವಾಗಿ (ಯಾಕೋಬ 1:5), ದೇವರ ವಾಕ್ಯವನ್ನು ನಾವು ಓದುವ ಮೂಲಕವಾಗಿ, ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವ ಮೂಲಕವಾಗಿ (ಕೀರ್ತನೆ 19:7; 119:98) ದೇವರು ನಮ್ಮ ಆತ್ಮೀಕ ಜ್ಞಾನವನ್ನು ಅಭಿವೃದ್ಧಿಗೊಳಿಸುತ್ತಾನೆ. ಸಕಲ "ಆತ್ಮೀಯ ಜ್ಞಾನವನ್ನೂ ತಿಳುವಳಿಕೆಯನ್ನೂ" ದೇವರ ಕೃಪಾವಂತಿಕೆಯಿಂದ ಪಡೆದುಕೊಳ್ಳಲ್ಪಡುತ್ತವೆ, ಹೊರತು ಮಾನವ ಯೋಗ್ಯತೆ ಅಥವಾ ಪ್ರಯಾಸದ ಮೇಲೆ ಪೂರ್ಣವಾಗಿ ಅವಲಂಭನೆಯಾಗಿರುವದಿಲ್ಲ.

## ಅವರ ಕ್ರೈಸ್ತ ನಡೆ ಮತ್ತು ಫಲ ಕೊಡುವಿಕೆ (1:10)

**[10]ಆತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷ ಪಡಿಸುವವರಾಗಿರಬೇಕಂತಲೂ ನೀವು ಸಕಲಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ.**

### "ಆತನಿಗೆ ಯೋಗ್ಯರಾಗಿ ನಡೆದು"

ಕೊಲೊಸ್ಸೆಯವರಿಗಾಗಿ ತನ್ನ ಬಯಸುವದನ್ನು ವ್ಯಕ್ತಪಡಿಸುವದಕ್ಕೆ ಪೌಲನು ಬಳಸಿದ ನಾಲ್ಕು ಪದಗುಚ್ಛಗಳು ಯಾವವೆಂದರೆ (1) "ಕರ್ತನಿಗೆ ಯೋಗ್ಯರಾಗಿ ನಡೆದು," (2) "ಎಲ್ಲಾ ವಿಧದಲ್ಲಿ ಆತನನ್ನು ಸಂತೋಷ ಪಡಿಸುವವರಾಗಿರಬೇಕೆಂತಲೂ," (3) "ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ," ಮತ್ತು (4) "ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ."

ಪೌಲನು ಕೊಲೊಸ್ಸೆಯವರ ವಿಷಯದಲ್ಲಿ ಮೇಲೆ ಉಲ್ಲೇಖಿಸಿದ ನಾಲ್ಕು ಗುಣಗಳಿಗಾಗಿ ಪ್ರಾರ್ಥಿಸುವ ಮುನ್ನ ಅವರು ಆತ್ಮೀಕ ಗ್ರಹಿಕೆ ಮತ್ತು ತಿಳುವಳಿಕೆಯನ್ನು ನೀಡುವಂತಹ ಒಂದು ಜ್ಞಾನವು ಕೊಡಲ್ಪಡುವಂತೆ ಪ್ರಾರ್ಥಿಸುವವನಾಗಿದ್ದನು. ಆತ್ಮೀಕ ಜ್ಞಾನವು ಈ ಆತ್ಮೀಕ ಗುಣಗಳನ್ನು ತೋರ್ಪಡಿಸುವಂತಹ ಜೀವಿತವನ್ನುಂಟು ಮಾಡತಕ್ಕದ್ದು. ಅವರ ಸಂಕೀರ್ಣತೆ ಮತ್ತು ಬಕ್ತಿಹೀನತೆಯಿಂದ ಕೂಡಿದ ಲೋಕದಲ್ಲಿ, ಕೊಲೊಸ್ಸೆಯವರಿಗೆ ದೇವರ ದೃಷ್ಟಿಯಲ್ಲಿ ಅಂಗೀಕಾರವಾಗುವಂತಹ ಆನಂದಕರ ಜೀವಿತವಾಗಿ ರೂಪಗೊಳ್ಳುವ ಪರಿಜ್ಞಾನಗಳ ಅಗತ್ಯತೆ ಇತ್ತು. ತಾನು ಇಸ್ರಾಯೇಲ್ಯರನ್ನು ಜ್ಞಾನದಿಂದ ಆಳ್ವಿಕೆ ಮಾಡುವದಕ್ಕೆ ಶಕ್ತನಾಗಲು ತನಗೆ ಈ ಗುಣಗಳನ್ನು ದಯಪಾಲಿಸುವಂತೆ ದೇವರನ್ನು ಬೇಡಿಕೊಂಡನು (2 ಪೂರ್ವಕಾಲವೃತ್ತಾಂತ 1:10).

**ನಡೆದು**, ಎಂದು ಪೌಲನು ಹೇಳಿದ ಮಾತಿನ ತಾತ್ಪರ್ಯವು ಶಾರೀರಿಕ ನಡೆಯುವಿಕೆ ಎಂಬುದರ ಬದಲಾಗಿ, ಒಂದು ಆತ್ಮೀಕ ನಡೆ – ಭಕ್ತಿಯ ಜೀವನ – ಎಂದಾಗಿರುತ್ತದೆ. ದೇವರಿಗೆ ಮೆಚ್ಚಿಕೆಯಾಗುವ ವಿಧದಲ್ಲಿ ಜೀವಿಸುವದನ್ನು ಸೂಚಿಸುವದಕ್ಕೆ ಯೇಸು ನಡೆಯುವಿಕೆಯ ಸಾದೃಶ್ಯವನ್ನು ಬಳಸಿದನು (ಯೋಹಾನ 8:12; 12:35). ದೇವರನ್ನು ಮತ್ತು ಆತನ ಚಿತ್ತವನ್ನು ಅರ್ಥಮಾಡಿಕೊಳ್ಳುವದು ಕ್ರೈಸ್ತರನ್ನು ಆತನಿಗೆ ಪ್ರೀತಿ ಮತ್ತು ವಿಧೇಯತೆಯನ್ನು ತೋರಿಸುವಂತೆ ನಡಿಸತಕ್ಕದ್ದು (ಯೋಹಾನ 14:15), ಮತ್ತು ಆ ಮೂಲಕ ಆತನಿಗೆ ಯೋಗ್ಯರಾಗಿ ನಡೆಯುವಂತೆ ಮಾಡತಕ್ಕದ್ದು.

ಒಬ್ಬ ಕ್ರೈಸ್ತನಾಗಿ ಜೀವಿಸುವದು ಎಂಬುದಕ್ಕಾಗಿ "ನಡೆಯುವಿಕೆ" ಎಂಬ ರೂಪಕೋಕ್ತಿಯನ್ನು ಪದೇ ಪದೇ ಬಳಸಿದನು.[5] ನಡೆಯುವಿಕೆ ಒಂದು ಚಟುವಟಿಕೆ ಎಂಬ ಅರ್ಥವನ್ನು ಸೂಚಿಸುತ್ತದೆ. ಕ್ರೈಸ್ತ ಜೀವಿತವು ಒಂದು ಯಾವಾಗಲೂ ಕುಳಿತೇ ಇರುವ ಜೀವನಲ್ಲ, ಆದರೆ ಯೇಸುವಿನ ಸೇವೆಯಲ್ಲಿ ನಿರಂತರವಾಗಿ ಸಕ್ರಿಯವಾಗಿರುವಂಥ ಜೀವನವಾಗಿದೆ. ಆತನು ಹಿಂಬಾಲಕರು ನಡೆಯುವಂತೆ ಮತ್ತು ನಿಲ್ಲುವಂತೆ ಆಜ್ಞಾಪಿಸಲ್ಪಟ್ಟಿದ್ದಾರೆ,[6] ಆದರೆ ಕುಳಿತುಕೋ ಎಂದು ಎಂದಿಗೂ ಆಜ್ಞಾಪಿಸಲ್ಪಟ್ಟಿಲ್ಲ.

"ಯೋಗ್ಯರಾಗಿ" ನಡಕೊಳ್ಳುವದು ಪೌಲನಿಗೆ ಪ್ರಾಮುಖ್ಯವಾಗಿತ್ತು. ಆತನು ಹೀಗೆ ಬರೆದನು, "ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು . . . ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ" (ಎಫೆಸ 4:1). ಕ್ರೈಸ್ತರು ದೇವರಿಗೆ ತಕ್ಕಂತೆ ಅಥವಾ ದೇವರ ವರಗಳಿಗೆ ಯೋಗ್ಯವಾದ ರೀತಿಯಲ್ಲಿ ನಡೆಯಬಲ್ಲರು ಎಂಬರ್ಥದಲ್ಲಿ ಆತನು ಹೇಳಲಿಲ್ಲ. ಪೌಲನ ಹಾಗೆ, ಯೇಸುವಿನ ಶಿಷ್ಯರೆಲ್ಲರೂ, ಏನಾಗಿದ್ದಾರೋ ಅದು ದೇವರ ಕೃಪೆಯಿಂದಲೇ ಆಗಿದ್ದಾರೆ (1 ಕೊರಿಂಥ 15:10). ಯಾರ ಜೀವಿತಗಳು ದೇವರ ಮಹಿಮೆಯನ್ನು ಪ್ರತಿಫಲನಗೊಳಿಸುತ್ತವೋ ಅವರು **ಕರ್ತನಿಗೆ ಯೋಗ್ಯರಾಗಿ ನಡೆಯು**ವವರಾಗಿದ್ದಾರೆ. ಸುಳ್ಳುಗಳನ್ನು ಹೇಳುವ, ವಂಚನೆಮಾಡುವ, ಮತ್ತು ತನ್ನ ಹುದ್ದೆಯ ಕರ್ತವ್ಯಗಳನ್ನು ಕಾರ್ಯರೂಪಕ್ಕೆ ತರದಂತಹ ಒಬ್ಬ ರಾಜಕೀಯ ವ್ಯಕ್ತಿಯು ತನ್ನ ಹುದ್ದೆಗೆ ಯೋಗ್ಯವಾದ ರೀತಿಯಲ್ಲಿ ನಡೆಯುವವನಾಗಿರುವದಿಲ್ಲ. ಯೇಸುವು ನಡೆದುಕೊಂಡ ರೀತಿಯಲ್ಲಿ ನಡೆಯುವದಕ್ಕೆ ಪ್ರಯತ್ನಿಸಿದ ಕ್ರೈಸ್ತರು ಕರ್ತನಿಗೆ ಯೋಗ್ಯರಾಗಿ ನಡೆಯುತ್ತಿರುವವರಲ್ಲ (1 ಯೋಹಾನ 2:6). ಯೋಗ್ಯರಾಗಿ ನಡೆಯುವ ವಿಚಾರವು ಪೌಲನಿಂದ ಫಿಲಿಪ್ಪಿ 1:27 ಮತ್ತು 1 ಥೆಸಲೋನಿಕ 2:12ರಲ್ಲಿ ಅದೇ ರೀತಿಯಲ್ಲಿ ಹೇಳಲ್ಪಟ್ಟಿದೆ.

(ನೋಡಿರಿ 3 ಯೋಹಾನ 6.)

ಕೊಲೊಸ್ಸೆಯವರು ಯೋಗ್ಯರಾಗಿ ನಡೆಯುವದಕ್ಕೆ ಮತ್ತು ಕರ್ತನನ್ನು ಮೆಚ್ಚಿಸುವದಕ್ಕೆ ಶಕ್ತರಾಗುವಂತೆ ಜ್ಞಾನವನ್ನು ಹೊಂದಬೇಕೆಂದು ಪೌಲನು ಪ್ರಾರ್ಥನೆ ಮಾಡುತ್ತಿದ್ದನು. ಒಬ್ಬ ವ್ಯಕ್ತಿಯು ದೇವರನ್ನು ಮೆಚ್ಚಿಸುವವನಾಗಿ ನಡೆಯಬಲ್ಲವನಾಗುವದಕ್ಕೆ ಮುನ್ನ ಆತರನ ಚಿತ್ತದ ತಿಳುವಳಿಕೆ ಅವಶ್ಯಕವಾಗಿರುತ್ತದೆ. ಮಾಹಿತಿ ಮತ್ತು ಪರಿಜ್ಞಾನಗಳು ಕಾರ್ಯರೂಪಕ್ಕೆ ತರಲ್ಪಡದಿದ್ದಲ್ಲಿ ಅವುಗಳು ನಿಷ್ಪ್ರಯೋಜಕವಾಗಿರುತ್ತವೆ. ದೇವರಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ನಡೆಯಲು ಈ ಮುಂಚೆ ಪಟ್ಟಿ ಮಾಡಲಾದ ನಾಲ್ಕು ಗುಣಗಳು ಕೊಲೊಸ್ಸೆಯವರಿಗೆ ಸಹಾಯ ಮಾಡಬಹುದಾಗಿದೆ. ಈ ಸದ್ಗುಣಗಳಿಂದ ಅವರು ತಮ್ಮ ಜೀವಿತಗಳನ್ನು ಯೇಸುವಿನ ಸಾರೂಪ್ಯದಂತೆ ರೂಪಿಸಿಕೊಳ್ಳಬಹುದಾಗಿರುತ್ತದೆ.

### "ಎಲ್ಲಾ ವಿಧದಲ್ಲಿ ಆತನನ್ನು ಸಂತೋಷ ಪಡಿಸುವವರಾಗಿರಬೇಕೆಂತಲೂ"

ಸಂತೋಷ ಪಡಿಸುವವರಾಗಿರಬೇಕು (ἀρεσκεία, *areskeia*) ಎಂಬುದು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಇದರ ಸಜಾತೀಯ ಕ್ರಿಯಾಪದವಾದ (ἀρέσκω, *areskō*) ಎಂಬುದು ಹದಿನೇಳು ಸಾರಿ ಬಳಸಲ್ಪಟ್ಟಿದೆ ಮತ್ತು ಹೆಚ್ಚು ಸಾರಿ ದೇವರನ್ನು ಸಂತೋಷಪಡಿಸುವದು ಎಂಬದಕ್ಕಿಂತಲೂ ಮನುಷ್ಯರನ್ನು ಸಂತೋಷ ಪಡಿಸುವದು ಎಂಬದನ್ನು ಸೂಚಿಸುತ್ತದೆ.[7] ರೋಮಾ 15:1–3 ಸೂಚಿಸುವದೇನೆಂದರೆ ತನ್ನನ್ನು ಸಂತೋಷಪಡಿಸಿಕೊಳ್ಳುವ ಉದ್ದೇಶ ಹೊಂದಿಲ್ಲದ ಯೇಸುವಿನ ಮಾದರಿಯನ್ನು ನಾವು ಅನುಸರಿಸುವದಕ್ಕೆ ಪ್ರಯತ್ನಿಸಬೇಕು ಎಂಬದೆ. ಬದಲಾಗಿ, ಆತನು ನಮ್ಮ ಅಪರಾಧಗಳನ್ನು ಹೊತ್ತುಕೊಂಡನು.

ಜ್ಞಾನವೊಂದೇ ಇದ್ದರೆ ಪ್ರಯೋಜನವಿರುವದಿಲ್ಲ. ಯಾಕೋಬನು ಹೀಗೆ ಬರೆದನು, "ಹೀಗಿರುವದರಿಂದ ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳಗಾಗಿದ್ದಾನೆ" (ಯಾಕೋಬ 4:17). ಆತ್ಮೀಕ ಜ್ಞಾನ ಮತ್ತು ಗ್ರಹಿಕೆಗಳನ್ನು ಹೊಂದಿಕೊಂಡಿರುವದರ ಉದ್ದೇಶವು ಅವುಗಳನ್ನು ದೇವರಿಗೆ ಸಂತೋಷವಾಗುವ ರೀತಿಯಲ್ಲಿ ಜೀವನದ ಪರಿಸ್ಥಿಗಳಿಗೆ ಅನ್ವಯಿಸಿಕೊಳ್ಳುವದೇ ಆಗಿರುತ್ತದೆ. ಬೈಬಲಿನಲ್ಲಿ ಸಿಕ್ಕುವ ಪ್ರಕಟನೆಯಿಲ್ಲದೆ ಯಾರೊಬ್ಬನೂ ಆತನ ಚಿತ್ತವನ್ನು ತಿಳಿಯಲಾರನು, ಅದರರ್ಥವು ಒಬ್ಬನು ಬೈಬಲ್ ಬೋಧನೆಗಳನ್ನು ಅರ್ಥಮಾಡಿಕೊಳ್ಳುವ ಹೊರತು ಆತನನ್ನು ಎಲ್ಲಾ ವಿಧದಲ್ಲಿ ಸಂತೋಷ ಪಡಿಸುವದಕ್ಕಾಗುವದಿಲ್ಲ. **ಎಲ್ಲಾ ವಿಧದಲ್ಲಿ** ಎಂಬುದರ ಅರ್ಥವು ಕೊಲೊಸ್ಸೆಯವರು ಕ್ರೈಸ್ತ ಜೀವಿತದ ಪ್ರತಿಯೊಂದು ಅಂಶವನ್ನು ಅನುಸರಿಸಬೇಕು ಮತ್ತು ಯೇಸುವಿನ ಬೋಧನೆಯಲ್ಲಿ ಯಾವದನ್ನೂ ನಿರ್ಲಕ್ಷಿಸಬಾರದು ಎಂಬುದು ಪೌಲನ ಇಚ್ಛೆಯಾಗಿತ್ತು. ಅದರಲ್ಲಿ ಆತನು ಕಲಿಸಿದ ಸತ್ಯಕ್ಕೆ ಮಾತ್ರವೇ ಅವರ ಜೀವಿತಗಳನ್ನು ಸಿಮೀತಗೊಳಿಸಿಕೊಳ್ಳತಕ್ಕದ್ದು, ಆತನ ಬೋಧನೆಗೆ ಏನನ್ನಾದರೂ ಸೇರಿಸುವದನ್ನಾಗಿ ಅಥವಾ ತೆಗೆಯುವದನ್ನಾಗಲಿ ಮಾಡದಿರಬೇಕು ಎಂಬರ್ಥವಾಗುವದು.

ದೇವರನ್ನು ಸಂತೋಷ ಪಡಿಸುವವರು, ಸ್ವಲ್ಪ ಮಟ್ಟಿಗೆ, ಇತರರನ್ನು ಸಂತೋಷ ಪಡಿಸತಕ್ಕದ್ದು. ಪೌಲನು ತನ್ನ ಜೀವಿತವು ಕ್ರೈಸ್ತೇತರರ ಮೇಲೆ ಬೀರಬಹುದಾದ ಪ್ರಭಾವದ ಬಗ್ಗೆ ಗಮನವನ್ನು ಕೇಂದ್ರಿಕರಿಸಿದ್ದನು; ಹೀಗೆ ಆತನು ಯಾರಾರಿಗೆ ಎಂಥವನಾಗಬೇಕೋ ಅಂಥಂಥವನಾಗಿದ್ದನು (1 ಕೊರಿಂಥ 9:20–23). ಆತನು ಇತರರನ್ನು ಬೇಸರ ಪಡಿಸುವದಕ್ಕೆ

ಪ್ರಯತ್ನಿಸದೆ ಅವರನ್ನು ಸಂತೋಷ ಪಡಿಸುವದಕ್ಕೆ ಪ್ರಯತ್ನಿಸಿದನು; ಆದಾಗ್ಯೂ ಆತನ ಮುಖ್ಯ ಕಳಕಳಿಯು ದೇವರನ್ನು ಸಂತೋಷ ಪಡಿಸಬೇಕೆಂಬುದೇ ಆಗಿತ್ತು. ಆತನು ಕ್ರೈಸ್ತರನ್ನು ಕ್ರಿಸ್ತನು ಮಾಡಿದ್ದ ಪ್ರಕಾರವೇ, ಅವರ ಪ್ರಯೋಜನಾರ್ಥವಾಗಿ ಇತರರನ್ನು ಸಂತೋಷ ಪಡಿಸಬೇಕೆಂದು ಪ್ರಬೋಧಿಸಿದನು.

ಕೊಲೊಸ್ಸೆಯಲ್ಲಿರುವ ಸಹೋದರರು ಎಲ್ಲಾ ವಿಧದಲ್ಲಿ ದೇವರನ್ನ ಸಂತೋಷ ಪಡಿಸುವವರಾಗಬೇಕೆಂದು ಪೌಲನು ಪ್ರಾರ್ಥಿಸುತ್ತಿದ್ದನು. ನಾವು ದೇವರ ಮುಂದೆ ಹೇಗೆ ಅಂಗೀಕಾರರ್ಹರಾಗಬಲ್ಲೆವು ಎಂಬುದಕ್ಕೆ ಪೌಲನ ಬುದ್ಧಿವಾದಗಳು ನಮಗೆ ಸಂಕ್ಷಿಪ್ತ ವಿವರಣೆಗಳನ್ನು ಒದಗಿಸುತ್ತವೆ.

## "ಸಕಲಸತ್ಕಾರ್ಯವೆಂಬ ಫಲವನ್ನ ಕೊಡುತ್ತಾ"

ದೇವರನ್ನು ಸಂತೋಷಪಡಿಸುವದಕ್ಕೆ ಕೊಲೊಸ್ಸೆಯವರು ಏನು ಮಾಡಬೇಕೆಂಬುದನ್ನು ಪ್ರಕಟಗೊಳಿಸಲು ಪೌಲನು 10 ರಿಂದ 12 ವಚನಗಳಲ್ಲಿ ನಾಲ್ಕು ಕೃದಂತಗಳನ್ನು ಬಳಸುತ್ತಾನೆ: (1) **ಫಲವನ್ನು ಕೊಡುತ್ತಾ;** (2) ". . . ಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ" (ವ. 10); (3) "ತಾಳ್ಮೆಯನ್ನೂ ದೀರ್ಘಶಾಂತಿಯನ್ನೂ . . . ತೋರಿಸುವವರಾಗಿರಬೇಕೆಂತಲೂ" (ವ. 11); ಮತ್ತು (4) "ತಂದಗೆ ಕೃತಜ್ಞತಾಸ್ತುತಿ ಮಾಡುವವರಾಗಿರಬೇಕೆಂತಲೂ" (ವ 12).

"ಫಲವನ್ನು ಕೊಡುತ್ತಾ" καρποφοροῦντες (*karpophorountes*) ಎಂಬುದು ಒಂದು ಸಂಯುಕ್ತ ಪದವಾಗಿದ್ದು, ಅದು *karpos*, "ಫಲ" ಮತ್ತು *phoreō*, "ಕೊಡು" ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಈ ಪದದ ರೂಪಗಳನ್ನು ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ ಎರಡು ಸಾರಿ ಬಳಸಿದನು, ಇಲ್ಲಿ ಮತ್ತು 1:6ರಲ್ಲಿ, ಮತ್ತು ರೋಮಾ 7:4, 5ರಲ್ಲಿ ಇನ್ನೂ ಎರಡು ಸಾರಿ ಬಳಸಿದನು. ಕ್ರೈಸ್ತರ ಫಲವು ಒಂದು ನೀತಿಯುಳ್ಳ ಜೀವನವಾಗಿರತಕ್ಕದ್ದು. ದೇವರು ಹೆಚ್ಚು ಫಲ ಕೊಡುವವರ ಮೂಲಕ ಮಹಿಮೆ ಹೊಂದುವನು (ಯೋಹಾನ 15:8).

ನಮಗೆ ಆತ್ಮೀಕ ಗ್ರಹಿಕೆಯಿರುವಾಗ, ನಾವು ಭಕ್ತಿಯುಳ್ಳ ಗುಣಗಳನ್ನು ಹೊಂದುವೆವು, ಇತರರಿಗೆ ಸಹಾಯ ಮಾಡಲು ಮುಂದಾಗುವಂಥಹ ಸೇವಾ ಮನೋಭಾವದಿಂದ ಕೂಡಿದ ಜೀವಿತಗಳನ್ನು ನಡಿಸುವೆವು, ಮತ್ತು ಕ್ರಿಸ್ತನನ್ನು ಹಿಂಬಾಲಿಸುವಂತೆ ಇತರರನ್ನು ಪ್ರಭಾವಗೊಳಿಸುವೆವು. ದೇವರಿಗೆ ಸಂತೋಷವನ್ನುಂಟು ಮಾಡುವವರು ಆತ್ಮೀಕವಾಗಿ ಫಲದಾಯಕವಾಗಿರುತ್ತಾರೆ.

ಫಲಭರಿತ ಜೀವಿತಗಳನ್ನು ಬೆಳೆಸಿಕೊಂಡು **ಸತ್ಕಾರ್ಯ** [ಗಳನ್ನು] ವೆಂಬ ಫಲವನ್ನು ಕೊಡುವದಕ್ಕಿಂತಲೂ ಬಹುಶಃ ಇತರರಲ್ಲಿ ತಪ್ಪುಗಳನ್ನು ಕಂಡು ಹಿಡಿಯುವದು ಸುಲಭವಾಗಿರಬಹುದಾಗಿದೆ. ಆತನ ವಾಕ್ಯವನ್ನು ಸಾರುವವರು ಅವರ ಸಂದೇಶದ ಕಳಪೆ ಪ್ರತಿನಿಧಿಗಳಾಗಿರಕೂಡದು. ಸುವಾರ್ತೆಯ ಸತ್ಯವನ್ನು ಮತ್ತು ಸೊಬಗನ್ನು ಪ್ರಕಟಗೊಳಿಸುವ ಉತ್ತಮ ದಾರಿಗಳಲ್ಲೊಂದೆಂದರೆ ಅದರಂತೆ ಜೀವಿಸುವದೇ ಆಗಿದೆ. ಸಂದೇಶದಂತೆ ಜೀವಿಸುವದು ಬೋಧಿಸಲ್ಪಡುವ ಉತ್ತಮ ಸಂದೇಶದಂತಿರುತ್ತದೆ.

ಕ್ರೈಸ್ತರಾಗಿ, ನಾವು ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಯಾಕೆಂದರೆ ನಾವು ದೇವರ ಜೊತೆ ಕೆಲಸದವರಾಗಿದ್ದೇವೆ (ಎಫೆಸ 2:10). ತಮ್ಮ ಆತ್ಮೀಕ ಸಾಮರ್ಥ್ಯಗಳನ್ನು

ಅಭಿವೃದ್ಧಿಪಡಿಸಿಕೊಳ್ಳುವ ಮೂಲಕ ನಿಸ್ವಾರ್ಥದಿಂದ ಆತನ ಸೇವೆಯನ್ನು ಮಾಡುವವರ ಮುಖಾಂತರ ದೇವರು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಮಾಡುತ್ತಾನೆ (ಫಿಲಿಪ್ಪಿ 2:12, 13). ಸತ್ಕಾರ್ಯಗಳಿಂದ ರಕ್ಷಣೆ ಉಂಟಾಗುವದಿಲ್ಲ ಅಥವಾ ರಕ್ಷಣೆ ಯೋಗ್ಯರನ್ನಾಗಿರುವದಿಲ್ಲ (ಎಫೆಸ 2:8, 9) ಎಂಬುದು ನಿಜವಾದರೂ, ನಿತ್ಯಜೀವವನ್ನು ಪಡೆದುಕೊಳ್ಳಬೇಕೆಂದರೆ ಅವುಗಳು ಅವಶ್ಯಕವಾಗಿರುತ್ತವೆ (ರೋಮಾ 2:7).

ಒಬ್ಬ ಕ್ರೈಸ್ತನ ನಂಬಿಕೆಯು ಸತ್ಕಾರ್ಯಗಳಲ್ಲಿ ಪ್ರಕಟಗೊಳ್ಳುತ್ತದೆ (ಯಾಕೋಬ 2:17-26). ಕ್ರಿಯೆಗಳು ದೇವರಿಗೆ ಪ್ರಾಮುಖ್ಯವಾಗಿವೆ, ಯಾಕೆಂದರೆ ಆತನು ಮನುಷ್ಯರಿಗೆ ಅವರ ಕ್ರಿಯೆಗಳಿಂದ ನ್ಯಾಯತೀರಿಸುತ್ತಾನೆ (2 ಕೊರಿಂಥ 5:10; 1 ಪೇತ್ರ 1:17; ಪ್ರಕಟನೆ 20:11, 12). ಆತನು ದುಷ್ಕೃತ್ಯಗಳುಳ್ಳವರನ್ನು ದಂಡಿಸುವನು (ರೋಮಾ 2:6-11).

### "ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕೆಂತಲೂ"

ಆತ್ಮೀಕ ಜ್ಞಾನ ಮತ್ತು ಗ್ರಹಿಕೆಗಳನ್ನು ಪಡೆದುಕೊಳ್ಳುವದು ಕ್ರೈಸ್ತರನ್ನು ದೇವರ ಚಿತ್ತದ ವಿಷಯವಾದ ತಿಳುವಳಿಕೆಗೆ ಮಾತ್ರವೇ ನಡಿಸುವದಿಲ್ಲ, ಆದರೆ ಸ್ವತಃ **ದೇವಜ್ಞಾನಕ್ಕೆ**ಸಹ ನಡಿಸುತ್ತದೆ. ದೇವರನ್ನು ತಿಳಿದುಕೊಳ್ಳುವದು ಅತ್ಯಂಥ ಪ್ರಾಮುಖ್ಯವಾದದ್ದು. ಜ್ಞಾನಿಗಳು ಮತ್ತು ಬಲಿಷ್ಠರು ತಮ್ಮ ಸಾಮರ್ಥ್ಯಗಳಲ್ಲಿ ಮತ್ತು ಬಲಗಳಲ್ಲಿ ಹೆಚ್ಚಳ ಪಟ್ಟುಕೊಳ್ಳಬಾರದು; ಬದಲಾಗಿ, ತಾವು ದೇವರನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ತಿಳಿದುಕೊಂಡಿದ್ದಾರೆಂಬ ವಾಸ್ತವಾಂಶದಲ್ಲಿ ಹರ್ಷಿಸುವವರಾಗಿರಬೇಕು (ಯೆರೆಮೀಯ 9:23, 24). ನಿತ್ಯಜೀವವು ದೇವರನ್ನು ತಿಳಿದುಕೊಳ್ಳುವದರ ಮೇಲೆ ಆಧಾರವಾಗಿರುತ್ತದೆ (ಯೋಹಾನ 17:3). ಯೇಸು ಪುನಃ ಬರುವಾಗ, ಆತನು ದೇವರನ್ನರಿಯದರವ ಮೇಲೆ ನಿತ್ಯನಾಶನದ ಮೂಲಕ ಪ್ರತೀಕಾರವನ್ನು ಸಲ್ಲಿಸುವನು (2 ಥೆಸಲೋನಿಕ 1:7, 8).

"ದೇವಜ್ಞಾನದಿಂದ [ἐπίγνωσις, *epignōsis*]" ಎಂಬುದರಲ್ಲಿ ದೇವರ ಪ್ರಕಟಿಸಲ್ಪಟ್ಟ ಜ್ಞಾನ ಮಾತ್ರವಲ್ಲದೆ, ಆತನೊಂದಿಗೆ ಸಂಬಂಧವನ್ನು ಅನುಭವಿಸುವ ಮೂಲಕ ಬರುವಂತಹ ಜ್ಞಾನವು ಸಹ ಸೇರಿರುತ್ತದೆ (1:9ರ ಮೇಲಿನ ಚರ್ಚೆಯನ್ನು ನೋಡಿರಿ). ಅಷ್ಟುಮಾತ್ರವಲ್ಲದೆ, ದೇವರನ್ನು ಯೇಸುವಿನ ಮೂಲಕ (ಯೋಹಾನ 1:14, 18; 12:45; 14:9), ಆತನ ಸೃಷ್ಟಿಯಲ್ಲಿ (ಕೀರ್ತನೆ 19:1; ರೋಮಾ 1:20), ಆತನ ಕುರಿತು ಬೈಬಲಿನಲ್ಲಿರುವ ವರ್ಣನೆಗಳ ಮೂಲಕ, ಭಕ್ತಿವಂತ ಜನರ ಜೀವನಗಳಲ್ಲಿ, ಮತ್ತು ನಮ್ಮ ಆರಾಧನೆಯ ಮೂಲಕ ಕಾಣಬಹುದು ಮತ್ತು ತಿಳಿದುಕೊಳ್ಳಬಹುದು.

## ಅವರ ಆತ್ಮೀಕ ಬಲ (1:11, 12)

**[11]ಆತನ ಮಹಿಮಶಕ್ತಿಯ ಪ್ರಕಾರ ಪರಿಪೂರ್ಣಬಲಹೊಂದಿ ಬಲಿಷ್ಠರಾಗಿ ಆನಂದಪೂರ್ವಕವಾದ ತಾಳ್ಮೆಯನ್ನೂ ದೀರ್ಘಶಾಂತಿಯನ್ನೂ ಯಾವಾಗಲೂ ತೋರಿಸುವವರಾಗಬೇಕೆಂತಲೂ [12]. . . ತಂದೆಗೆ ಕೃತಜ್ಞಾತಾಸ್ತುತಿ ಮಾಡುವವ ರಾಗಿರಬೇಕೆಂತಲೂ . . .**

**“ಆತನ ಮಹಿಮಶಕ್ತಿಯ ಪ್ರಕಾರ ಪರಿಪೂರ್ಣಬಲಹೊಂದಿ ಬಲಿಷ್ಠರಾಗಿ” (1:11)**

ಕೊಲೊಸ್ಸೆಯವರನ್ನು ದೇವರಿಗೆ ಯೋಗ್ಯರಾಗಿ ನಡೆಯುವಂತೆ ಮಾಡಿದ ಪರಿಜ್ಞಾನಗಳ ಮೂಲಕ ಅವರಿಗೆ ಆತ್ಮೀಕ ಶಕ್ತಿ ಮತ್ತು ಬಲಗಳು ಬರುವವುಗಳಾಗಿದ್ದವು. ಅವರು ತಮ್ಮ ಪಾತ್ರವನ್ನು ಮಾಡುತ್ತಿರುವ ವೇಳೆ, ದೇವರು ಅವರನ್ನು ಬಲಗೊಳಿಸುವದಕ್ಕೆ ತನ್ನ ಪಾತ್ರವನ್ನು ಮಾಡುತ್ತಿದ್ದನು. ಲೋಕದ ಸಮಸ್ಯೆಗಳಿಗಿಂತಲೂ ಎಷ್ಟೋ ಅಧಿಕವಾಗಿರುವ ತನ್ನ ದೈವಿಕ ಶಕ್ತಿಯ ಮೂಲಕ ಜೀವನದ ಕಷ್ಟಗಳನ್ನು ಜಯಿಸುವಂತೆ ಸಹಾಯ ಮಾಡುವನು (1 ಯೋಹಾನ 4:4). ಆತನು ಅನುಗ್ರಹಿಸುವದಕ್ಕೆ ಮೀತಿಯಿಲ್ಲದಷ್ಟನ್ನು ಕೂಡಿಸಿಟ್ಟುಕೊಂಡಿದ್ದಾನೆ. **ಬಲಹೊಂದಿ** ಎಂದು ಅನುವಾದಿಸಲ್ಪಟ್ಟಿರುವ ಕ್ರಿಯಾಪದವು ಒಂದು ವರ್ತಮಾನಕಾಲ ಕೃದಂತವಾಗಿದ್ದು ಅದು ಕೇವಲ ಒಂದು ಸಾರಿ ಬಲಗೊಳ್ಳುವದನ್ನು ಮಾತ್ರ ಸೂಚಿಸುವದಿಲ್ಲ ಆದರೆ ಸ್ವತಃ ದೇವರ ಬಲದಿಂದಲೇ ಸಿಕ್ಕುವಂತಹ ನಿರಂತರವಾದ ಬಲಗೊಳ್ಳುವಿಕೆಯನ್ನು ಸೂಚಿಸುತ್ತದೆ.

ಗ್ರೀಕ್.ನಲ್ಲಿ, ನಾಮಪದ δυνάμει (*dunamei*) ಮತ್ತು ಕೃದಂತವಾದ δυναμούμενοι (*dunamoumenoi,* ಅಕ್ಷರಶಃ “ಬಲಗೊಳಿಸಲ್ಪಟ್ಟ ಶಕ್ತಿಯಿಂದ” ಎಂದರ್ಥ) ಗಳ ನಡುವಿನ ಹೋಲಿಕೆಯನ್ನು “ಸಕಲ ಶಕ್ತಿಯಿಂದ ಬಲಗೊಂಡು” ಎಂಬ ಅನುವಾದದ ಮೂಲಕ ತೋರ್ಪಡಿಸಲಾಗಿರುತ್ತದೆ. ಬಹುಶಃ ಪೌಲನು ಶಬ್ದಾಡಂಭರವನ್ನು ಬಳಸುವದಕ್ಕೆ ಉದ್ದೇಶಿಸಿರಬಹುದು. ಕ್ರೈಸ್ತರಿಗೆ ದೇವರ ಮಹಿಮಶಕ್ತಿಯಿಂದ ಬಲವು ಕೊಡಲ್ಪಡುತ್ತದೆ. dynamite ಎಂಬ ಪದವು ಗ್ರೀಕ್.ನ *dunamis* ಎಂಬದರಿಂದ ಬಂದಿರುತ್ತದೆ.

ಸ್ವಾಭಾವಿಕವಾಗಿ ಬಂದ ಶಕ್ತಿ ಮತ್ತು ಸಾಮರ್ಥ್ಯವಾದ *dunamis* ಮತ್ತು ಕ್ರಿಯೆ ಮಾಡಲು ಇರುವ ಹಕ್ಕು ಅಥವಾ ಶಕ್ತಿಯಾದ *exousia* (1:13ರಲ್ಲಿ “ದೊರೆತನ”; “ಅಧಿಕಾರ” ಮತ್ತು “ಅಧಿಕಾರಗಳು” ಎಂದು ಅನುವಾದಿಸಲ್ಪಟ್ಟಿದೆ 1:16; 2:10, 15) ನಡುವೆ ವ್ಯತ್ಯಾಸವನ್ನು ಮಾಡಬಹುದಾಗಿದೆ. ಒಂದು ಉದಾಹರಣೆಯೆಂದರೆ ಒಬ್ಬ ವ್ಯಕ್ತಿಗೆ ತಿಜೋರಿಯನ್ನು ತೆರೆಯುವ ಶಕ್ತಿ ಅಥವಾ ಸಾಮರ್ಥ್ಯ (*dunamis*) ಇರುತ್ತದೆ ಆದರೆ ಹಾಗೆ ಮಾಡುವದಕ್ಕೆ ಅಧಿಕಾರ ಅಥವಾ ಹಕ್ಕು (*exousia*) ಇರುವದಿಲ್ಲ.

ಸುವಾರ್ತೆಯು ರಕ್ಷಿಸುವದಕ್ಕೆ ದೇವರ ಬಲವಾಗಿದೆ (*dunamis*) (ರೋಮಾ 1:16). ಯೇಸುವಿನಲ್ಲಿ ನಂಬಿಕೆಯಿಡುವವರಿಗೆ ದೇವರ ಮಕ್ಕಳಾಗುವ “ಶಕ್ತಿ,” ಹಕ್ಕು ಅಥವಾ ಸಾಮರ್ಥ್ಯ (*exousia*) ಕೊಡಲ್ಪಡುತ್ತದೆ (ಯೋಹಾನ 1:12). ಯೇಸು ತನ್ನ ಅಪೊಸ್ತಲರಿಗೆ ದೆವ್ವಗಳ ಮೇಲೆ ಅಧಿಕಾರ (*exousia*) ಚಲಾಯಿಸುವದಕ್ಕೆ ಶಕ್ತಿಯನ್ನು (*dunamis*) ಮತ್ತು ಹಕ್ಕನ್ನು ಕೊಟ್ಟನು (ಲೂಕ 9:1).

ದೇವರು ಕ್ರೈಸ್ತರನ್ನು **ತನ್ನ ಮಹಿಮಶಕ್ತಿಯ** (κράτος, *kratos* “ಶಕ್ತಿ”; ಹೊಸ ಒಡಂಬಡಿಕೆಯಲ್ಲಿ ದೇವರ ವಿಷಯದಲ್ಲಿ ಮಾತ್ರವೇ ಬಳಸಲ್ಪಟ್ಟಿದೆ) **ಪ್ರಕಾರ** ಬಲಗೊಳಿಸಿದ್ದಾನೆ. ಅಂತಹ “ಶಕ್ತಿ” ದೇವರಲ್ಲಿ ಸಹಜವಾಗಿರುವದಾಗಿದೆ. ಈ ಶಕ್ತಿಯೇ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿತು (ಎಫೆಸ 1:19, 20). ಆತನ “ಮಹಿಮಶಕ್ತಿ”ಯು ಕರ್ತನಿಗೆ ಯೋಗ್ಯವಾದ ಜೀವಿತಗಳನ್ನ ನಡಿಸುವದಕ್ಕೆ ಬೇಕಾದ ತಾಳ್ಮೆಯನ್ನು ಬೆಳೆಸಿಕೊಳ್ಳಲು ಕ್ರೈಸ್ತರಿಗೆ ಸಹಾಯ ಮಾಡುವದಾಗಿದೆ. ದೇವರು ನಮ್ಮನ್ನು ನೀತಿಯ ಜೀವಿತಗಳನ್ನು ನಡಿಸುವದಕ್ಕೆ ಬಲಗೊಳಿಸುತ್ತಾನೆ ಮತ್ತು ಶಕ್ತರನ್ನಾಗಿರುತ್ತಾನೆ.

ದೇವರ "ಮಹಿಮ" (δόξα, *doxa*) ಶಕ್ತಿ ಸಾಮಾನ್ಯವಾಗಿ ಮಾನವನಿಗೆ ಪ್ರಕಟಗೊಳಿಸಲ್ಪಟ್ಟಿರುವ ದೇವರ ಘನಗಾಂಭೀರ್ಯತೆ ಮತ್ತು ಶಕ್ತಿಯನ್ನು ಸೂಚಿಸುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದೇವೆ (ರೋಮಾ 3:23).

ಪೌಲನು ಎಫೆಸದವರಿಗೆ ಕರ್ತನಲ್ಲಿ ಯಾವಾಗಲೂ ಬಲಗೊಳ್ಳಿರಿ (ἐνδυναμοῦσθε, *endunamousthe*) ಎಂದು ಬುದ್ಧಿವಾದ ಹೇಳಿದನು (ಎಫೆಸ 6:10). ಈ ಬಲವು ಪವಿತ್ರಾತ್ಮನ ಸಹಾಯದ ಮೂಲಕ ಬರುತ್ತದೆ (ಎಫೆಸ 3:16). ಕ್ರಿಸ್ತರಲ್ಲಿದ್ದವನಾಗಿ ಮತ್ತು ಲೋಕಕ್ಕಿಂತಲೂ ದೊಡ್ಡವನಾಗಿದ್ದು, ಪವಿತ್ರಾತ್ಮನು ಲೋಕವನ್ನು ಜಯಿಸುವಂತೆ ನಂಬಿಗಸ್ತರಿಗೆ ಸಹಾಯ ಮಾಡುತ್ತಾನೆ (1 ಯೋಹಾನ 4:4).

## "ತಾಳ್ಮೆಯನ್ನು ದೀರ್ಘಶಾಂತಿಯನ್ನೂ ಯಾವಾಗಲೂ ತೋರಿಸುವವರಾಗಿರಬೇಕೆಂತಲೂ" (1:11)

ದೇವರು ಕೊಲೊಸ್ಸೆಯವರನ್ನು ತನ್ನ ಶಕ್ತಿಯಿಂದ ಬಲಗೊಳಿಸುವ ಉದ್ದೇಶವು ಅವರನ್ನು ತಾಳ್ಮೆಯುಳ್ಳವರಾಗಿ, ದೀರ್ಘಶಾಂತಿ, ಮತ್ತು ಆನಂದವುಳ್ಳವರನ್ನಾಗಿ ಮಾಡುವದೇ ಆಗಿತ್ತು. **ತಾಳ್ಮೆ** ಮತ್ತು **ದೀರ್ಘಶಾಂತಿ** ಕುರಿತಾಗಿ A. T. Robertson ಈ ಕೆಳಗಿನದನ್ನು ಹೇಳುತ್ತಾನೆ:

> ತಾಳ್ಮೆ [*hupomonēn*, "ದೃಢತೆ" ಎಂದು ಅನುವಾದಿತ] ಎಂಬುದರ ಅರ್ಥವು ಅಂಜಿಕೆ ಅಥವಾ ಎದೆಗುಂದಿಕೆ ಇಲ್ಲದೆ, ಯುದ್ಧದ ವೇಳೆಯಲ್ಲಿ ಸೈನಿಕರು ಹೇಳಿದಂತೆ, "ಮುನ್ನಡೆಯುವದು," ಕೈಲಗದೆ ಬಿಟ್ಟುಬಿಡಬೇಕೆಂದದು ಅನ್ನಿಸುವಾದ ತಾಳ್ಮೆ ಮತ್ತು ದೃಢತೆ ಮುಂದುವರೆಯುತ್ತವೆ; ಮತ್ತು ದೀರ್ಘಶಾಂತಿ [*makrothumian*, "ಸಹನೆ" ಎಂದು ಅನುವಾದಿತ] ಎಂದರೆ ಕೋಪ, ಪ್ರತೀಕಾರ, ಸೇಡು ಇಲ್ಲದಿರುವಿಕೆ, ದೀರ್ಘಕಾಲ ಹಿಡಿದಿಟ್ಟುಕೊಳ್ಳುವದು ಮತ್ತು ಒಂದು ದೊಡ್ಡ ಪ್ರಯಾಸವನ್ನು ಪಡುವದು ಎಂದರ್ಥ. ಎರಡು ಪದಗಳು ಒಂದಕ್ಕೊಂದು ಕೊರತೆಯನ್ನು ತುಂಬಲು ಮತ್ತು ಪೂರಕವಾಗಿ ಪದೇ ಪದೇ ಒಟ್ಟಾಗಿ ಕಾಣಿಸಿಕೊಳ್ಳುತ್ತವೆ (2 ಕೊರಿಂಥ 6:4, 6; 2 ತಿಮೊಥೆ 3:10; ಯಾಕೋಬ 5:10-11).[8]

ದೀರ್ಘಶಾಂತಿಯು ಒಬ್ಬ ವ್ಯಕ್ತಿಯನ್ನು ಕಷ್ಟಗಳ ಮತ್ತು ಸಂಕಷ್ಟಗಳ ಮಧ್ಯದಲ್ಲಿಯೂ ಗುರಿಯೊಂದನ್ನು ಸಾಧಿಸಿಕೊಳ್ಳುವದರಲ್ಲಿ ಸ್ಥಿರವಾಗಿರುವಂಥೆ ನಡಿಸುವ ಗುಣವಾಗಿರುತ್ತದೆ. ಜೀವನದಲ್ಲಿ ನೋವುಗಳನ್ನು ಮತ್ತು ಒತ್ತಡಗಳ ಹೊರತಾಗಿಯೂ ಸಹಿಸಿಕೊಂಡು ಸೇವೆಯನ್ನು ಮಾಡುವಂತೆ ತಾಳ್ಮೆಯು ಸ್ಪೂರ್ತಿಯನ್ನು ಒದಗಿಸುತ್ತದೆ. ಪ್ರತೀಕಾರ ಮಾಡಬೇಕೆಂಬುದು ಸ್ವಭಾವತಃ ಇರುವಂಥದ್ದಾಗಿದೆ, ಆದರೆ ತಾಳ್ಮೆಯು ಮುಯ್ಯಿ ತೀರಿಸುವದನ್ನು ಬಿಟ್ಟು ಬಿಡುತ್ತದೆ, ಹೀಗೆ ಅದಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದರ ಮೇಲೆ ತನ್ನ ಶಕ್ತಿಯನ್ನೆಲ್ಲಾ ವ್ಯಯಿಸುವಂತೆ ಮತ್ತು ದುಷ್ಟರಿಗೆ ಮುಯ್ಯಿ ತೀರಿಸುವಂತೆ ದೇವರಿಗಾಗಿ ಕಾಯುವಂತೆ ಅನುಮತಿಸುತ್ತದೆ (ರೋಮಾ 12:17, 19).

**ತೋರಿಸುವವರಾಗಿರಬೇಕೆಂತಲೂ** ಎಂಬ ಪದವು ಕೊಲೊಸ್ಸೆಯವರಿಗಾಗಿ ಇರುವ ಗುರಿಯನ್ನು ಸೂಚಿಸುವದಾಗಿ ದೀರ್ಘಶಾಂತಿ ಮತ್ತು ತಾಳ್ಮೆಯೊಂದಿಗೆ ಸಂಬಂಧ

ಹೊಂದಿರುತ್ತದೆ. ಅವರು ಈ ಗುಣಗಳಲ್ಲಿ ಸಂಪೂರ್ಣತೆಯನ್ನು ಹೊಂದುವದರೆಡೆಗೆ, ಅಥವಾ ಪರಿಪಕ್ವಗೊಳ್ಳುವದಕ್ಕೆ ಪರಿಶ್ರಮ ಪಡಬೇಕಾಗಿತ್ತು. ದೇವರ ಸಹಾಯ ಮತ್ತು ಅವರ ವೈಯಕ್ತಿಕ ಪ್ರಯಾಸಗಳ ಮೂಲಕ, ಅವರು ಜೀವನದ ಕಠಿಣತೆಗಳನ್ನು ಜಯಿಸುವವರಾಗಿ ಬಹು ಕಷ್ಟಕರವಾದ ಪರಿಸ್ಥಿತಿಗಳಲ್ಲಿ ತಮ್ಮ ಕ್ರೈಸ್ತ ಗುಣಸ್ವಭಾವವನ್ನು ಉಳಿಸಿಕೊಂಡು ಹೋಗುವರು.

H. C. G. Moule ಈ ಅಭಿಪ್ರಾಯ ಪಡುತ್ತಾನೆ, "ದೇವಜನರಲ್ಲಿ ದೈವಿಕ ಶಕ್ತಿ ಸಂಪೂರ್ಣತೆಯು ಪ್ರಾಥಮಿಕವಾಗಿ 'ಒಂದು ಮಹಾ ಕಾರ್ಯವನ್ನು ಮಾಡುವದ'ರಲ್ಲಿ ಫಲಿತಗೊಳ್ಳುವದಲ್ಲ ಆದರೆ ಹೃದಯದಲ್ಲಿ ಪರಲೋಕದ ಸಂತೋಷವುಳ್ಳವರಾಗಿ ಸೈರಿಸಿಕೊಂಡು ತಾಳ್ಮೆಯಿಂದಿರುವದರಲ್ಲಿ ಫಲಿತಗೊಳ್ಳುವದೇ ಆಗಿದೆ."[9] ದೇವರ ಚಿಂತೆಯು ಕ್ರೈಸ್ತರಲ್ಲಿ ಸೈರಣೆಯಿರಬೇಕೆಂಬುದೇ, ಹೊರತು ಮೀರಿಸಲಾಗದ ಕಾರ್ಯ ನಿರ್ವಹನೆಯಲ್ಲ.

ಪೌಲನು ಕ್ರಿಸ್ತನಲ್ಲಿನ ತನ್ನ ಸಹೋದರ ಮತ್ತು ಸಹೋದರಿಯರಿಗಾಗಿ ಬಯಸಿದ "ಬಲ"ವು ಕ್ರೈಸ್ತರಿಗಾಗಿ ಸಹಿಸಿಕೊಳ್ಳುವದಕ್ಕಾಗಿ ಅವರಿಗೆ ಬಲವಾಗಿತ್ತು – ಹೊರತು ಅದ್ಭುತಗಳನ್ನು ನಡಿಸುವದಕ್ಕೆ ಬಲ ಎಂದಾಗಿರಲಿಲ್ಲ, ಆದರೂ ಯೇಸುವಿನ ಬಲಿಷ್ಠ ಕಾರ್ಯಗಳನ್ನು ಸೂಚಿಸುವಾಗ ಅದೇ ಪದವು "ಸೂಚಕಕಾರ್ಯಗಳು" ಅಥವಾ "ಅದ್ಭುತಕಾರ್ಯಗಳು" ಎಂದು ಅನುವಾದಿಸಲ್ಪಟ್ಟಿರುತ್ತದೆ (ಮತ್ತಾಯ 11:20, 21, 23; 13:54). ಅದ್ಭುತಗಳು ತಮ್ಮ ಉದ್ದೇಶಗಳನ್ನು ನೆರವೇರಿಸಿದ್ದವು – ದೇವರ ಚಿತ್ತವನ್ನು ದೃಢೀಕರಿಸುವದು. ಅವುಗಳು ಯೇಸುವಿನ ಮೆಸ್ಸೀಯತ್ವವನ್ನು (ಯೋಹಾನ 20:30, 31; ಅಪೊಸ್ತಲರ ಕೃತ್ಯಗಳು 2:22), ಅಪೊಸ್ತಲರ ಅಧಿಕಾರವನ್ನು (2 ಕೊರಿಂಥ 12:12), ಮತ್ತು ಸಾರಲ್ಪಡುತ್ತಿದ್ದ ವಾಕ್ಯದ ದೈವಿಕ ಮೂಲವನ್ನು (ಮಾರ್ಕ 16:20; ಅಪೊಸ್ತಲರ ಕೃತ್ಯಗಳು 14:3; ಇಬ್ರಿಯ 2:3, 4) ಪ್ರಮಾಣೀಕರಿಸಿದ್ದವು. ಕ್ರೈಸ್ತರಿಗಾಗಿ ಬಲವು ಜಯಶಾಲಿಗಳಾಗುವದಕ್ಕೆ ಮತ್ತು ಯೇಸುವಿಗೋಸ್ಕರ ಜಯಭರಿತರಾಗಿ ಜೀವಿಸುವದಕ್ಕಾಗಿ ಆಗಿತ್ತು ಯಾಕೆಂದರೆ ಅದ್ಭುತಗಳಿಗಿಂತಲೂ ದೇವರಿಗಾಗಿ ಪ್ರೀತಿಯು ಇನ್ನು ಹೆಚ್ಚು ಪ್ರಾಮುಖ್ಯವಾದದ್ದು (1 ಕೊರಿಂಥ 13:1-3).

ಅವರ ಜೀವಿತಗಳಲ್ಲಿ ದೇವರ ಶಕ್ತಿಯು ಅದ್ಭುತಕರ ಉದ್ದೇಶಗಳಿಗಾಗಿ ಎಂದು ಹೇಳಲ್ಪಟ್ಟಿಲ್ಲ, ಆದರೆ ಅವರ ಆತ್ಮೀಕ ಪ್ರಯೋಜನಕ್ಕಾಗಿಯೇ ಆಗಿದೆ. ದೇವರಿಂದ ದೊರಕುವ ಬಲದಿಂದ ಅದ್ಭುತಗಳು ನಡಿಸಲ್ಪಡುತ್ತಿದ್ದವಾದರೂ, ಅಂಥ ಬಲವನ್ನು ಕೆಲವು ಕ್ರೈಸ್ತರು ಮಾತ್ರವೇ ಹೊಂದಿಕೊಂಡಿದ್ದರು (1 ಕೊರಿಂಥ 12:29, 30). ಲೋಕದಲ್ಲಿ ಕಾರ್ಯ ಮಾಡುತ್ತಿರುವ ದುಷ್ಟನ ವಿರುದ್ಧ ಹೋರಾಡುವದರಲ್ಲಿ ಸಹಾಯ ಮಾಡುವದಕ್ಕಾಗಿ ಎಲ್ಲಾ ಕ್ರೈಸ್ತರಿಗೂ ಶಕ್ತಿಯು ಕೊಡಲ್ಪಟ್ಟಿದೆ (1 ಯೋಹಾನ 4:4). ದುಷ್ಟನ ವಿರೋಧವನ್ನು ಎದುರಿಸಿ ಹೋರಾಡುವದಕ್ಕೆ ಪವಿತ್ರಾತ್ಮನು ಹಾಗೂ ದೇವರ ಆತ್ಮೀಕ ಯುದ್ಧಾಯುಧಗಳು ಕ್ರೈಸ್ತರಿಗೆ ಸಹಾಯವನ್ನು ಒದಗಿಸುತ್ತವೆ (ಎಫೆಸ 6:10-18).

ಬಹುಶಃ **ಆನಂದಪೂರ್ವಕವಾದ** ಎಂಬುದು "ತಾಳ್ಮೆಯನ್ನೂ ದೀರ್ಘಶಾಂತಿಯನ್ನೂ" (KJV; NKJV; RSV) ಎಂಬುದರೊಂದಿಗೆ ಜೋಡಿಸುವ ಬದಲಾಗಿ, "ಕೃತಜ್ಞತಾಸ್ತುತಿ" ಮಾಡುವದರೊಂದಿಗೆ ಸಂಬಂಧಿಸಲ್ಪಡತಕ್ಕದ್ದಾಗಿದೆ (ವ. 12; NASB; NIV; NRSV).

ಕ್ರೈಸ್ತರು ಹರ್ಷದಿಂದ ತುಂಬಿದವರಾಗಿರತಕ್ಕದ್ದು. ನಮ್ಮ ಆನಂದವು ಕ್ರಿಸ್ತನಲ್ಲಿ ಹರ್ಷಿಸುವದಕ್ಕೆ ಕಾರಣವನ್ನು ಒದಗಿಸುವ ನೀತಿಯ ಜೀವನದಿಂದ ಉಂಟಾಗತಕ್ಕದ್ದು (ಫಿಲಿಪ್ಪಿ 4:4).

### "ತಂದೆಗೆ ಕೃತಜ್ಞತಾಸ್ತುತಿ ಮಾಡುವವರಾಗಿರಬೇಕೆಂತಲೂ" (1:12)

ಪತ್ರಿಕೆಯ ಆರಂಭದಲ್ಲಿನ ವಂದನೆ ಹೇಳುವಿಕೆಯಲ್ಲಿ (1:3-8), ಪೌಲನು ಕೊಲೊಸ್ಸೆಯವರಿಗಾಗಿ ತಾನು ಪ್ರಾರ್ಥನೆಯಲ್ಲಿ ದೇವರಿಗೆ ಸ್ತೋತ್ರ ಮಾಡಿದನೆಂಬುದಾಗಿ ಹೇಳಿದನು (1:3ರ ಮೇಲಿನ ಚರ್ಚೆಯನ್ನು ನೋಡಿರಿ). ತನ್ನನ್ನು ಒಂದು ಉದಾಹರಣೆಯಾಗಿ ಕೊಟ್ಟ ಬಳಿಕ, ಆತನು ಅವರಿಗೆ ಕೃತಜ್ಞತಾಸ್ತುತಿ ಮಾಡಬೇಕೆಂದು ಬೋಧಿಸಿದನು. ಉಪದೇಶಕನು ತಾನು ಏನು ಉಪದೇಶಿಸುತ್ತಾನೋ ಅದಕ್ಕೆ ಯಾವಾಗಲೂ ಒಂದು ಮಾದರಿಯಾಗಿರಬೇಕು.

ಕೃತಜ್ಞತಾಸ್ತುತಿಯನ್ನು ತಂದೆಗೆ ನಿರಂತರವಾಗಿ ಮತ್ತು ಆನಂದಪೂರ್ವಕವಾಗಿ ಕೊಡಬೇಕಾಗಿತ್ತು (ನೋಡಿರಿ 1 ಥೆಸಲೋನಿಕ 5:18) ಯಾಕೆಂದರೆ ಆತನು ಈ ಕ್ರೈಸ್ತರನ್ನು ಬೆಳಕಿನ ರಾಜ್ಯದೊಳಗಿನ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವಂತೆ ಯೋಗ್ಯರನ್ನಾಗಿ ಮಾಡಿದ್ದನು. ದೇವರನ್ನು ತಂದೆ ಎಂದು ಕರೆಯುವದರಲ್ಲಿ, ಪೌಲನು ಕೊಲೊಸ್ಸೆಯವರ ಸಂಬಂಧವನ್ನು ದೇವರೊಂದಿಗೆ ಸ್ಥಾಪಿಸಿದನು. ಅವರು ಆತನ ಮಕ್ಕಳಾಗಿದ್ದರು – ಅದೇ ರೀತಿಯೇ ನಂಬಿಕೆಯ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನಾವೆಲ್ಲರೂ ಸಹ ಆಗಿದ್ದೇವೆ (ಗಲಾತ್ಯ 3:26, 27).

## ಬೆಳಕಿನ ರಾಜ್ಯದೊಳಗೆ ಪ್ರವೇಶ (1:12, 13)

**12ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ . . .**

**13ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**

### "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ" (1:12)

ಮೊದಲನೆಯದಾಗಿ, ಪೌಲನ ಸಹೋದರರನ್ನು [ಒಂದು ಆತ್ಮೀಕ] **ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ . . . ಯೋಗ್ಯರು** ಎಂದು ಬಣ್ಣಿಸಿದನು. "ಯೋಗ್ಯರು"," ಎಂಬುದು ಒಂದು ಅನಿಶ್ಚಿತ ಭೂತಕಾಲ ಕೃದಂತವಾಗಿದ್ದು, ದೇವರು ನಮ್ಮನ್ನು ಯೋಗ್ಯರನ್ನಾಗಿ ಮಾಡಿರುವ ಕ್ರಿಯೆಯ ಪೂರ್ಣತೆಯನ್ನು ವ್ಯಕ್ತಪಡಿಸುತ್ತದೆ. ಈ ಪದವು ಗ್ರೀಕ್‌ನ ἱκανώσαντι (*hikanōsanti*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಇದು ಒಂದು ಕಾರಣಾರ್ಥಕ ಕ್ರಿಯಾಪದವಾಗಿದ್ದು "ತಕ್ಕ, ಬೇಕಾದಷ್ಟು, ಸಾಕಾದ" ಎಂಬ ಅರ್ಥವನ್ನು ಕೊಡುತ್ತದೆ. ಅದು ಹೊಸ ಒಡಂಬಡಿಕೆಯಲ್ಲಿ ಇನ್ನು ಒಂದೇ ಒಂದು ಸಾರಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು "ನಮ್ಮನ್ನು ಸಾಕಾದವರನ್ನಾಗಿ ಮಾಡಿದ್ದಾನೆ" (2 ಕೊರಿಂಥ

3:6; NASB) ಅಥವಾ "ಸಾಮರ್ಥ್ಯವನ್ನು . . . ನಮಗೆ ಅನುಗ್ರಹಿಸಿದ್ದಾನೆ" (KJV) ಎಂದು ಅನುವಾದಿಸಲ್ಪಟ್ಟಿದೆ. ಜನರು ತಮ್ಮ ಸ್ವಸಾಮರ್ಥ್ಯಗಳಿಂದ ತಮ್ಮನ್ನು ದೇವರಿಂದ ವಾಗ್ದಾನ ಮಾಡಲ್ಪಟ್ಟಿರುವ ಬಾಧ್ಯತೆಗೆ ಯೋಗ್ಯರನ್ನಾಗಿ ಮಾಡಿಕೊಳ್ಳಲು ಅಶಕ್ತರಾಗಿದ್ದಾರೆ. ಮತ್ತೊಬ್ಬನ – ಯೇಸು – ಕಾರ್ಯವೇ ಯೋಗ್ಯತೆಯನ್ನು ಸಾಧ್ಯವಾಗಿಸುತ್ತದೆ. ಮಹಾ ಆಶೀರ್ವಾದದ ಮೂಲನಾದ ದೇವರು, ಯೇಸುವಿನ ಮೂಲಕ ಕೊಲೊಸ್ಸೆಯವರನ್ನು ಯೋಗ್ಯರನ್ನಾಗಿ ಮಾಡಿ ಬಾಧ್ಯತೆಯನ್ನು ಹೊಂದಿಕೊಳ್ಳುವಂತೆ ಶಕ್ತಗೊಳಿಸಿದ್ದನು. ಈ ಬಾಧ್ಯತೆಯು ಪರಲೋಕದಲ್ಲಿನ ಒಂದು ನಿವಾಸ ಆಗಿರುತ್ತದೆ (1 ಪೇತ್ರ 1:3, 4). ಪರಿಶುದ್ಧಗೊಳಿಸಲ್ಪಟ್ಟವರೆಲ್ಲರೂ ಪರಲೋಕದಲ್ಲಿ ಪಾಲುಗಾರರಾಗುವರು; ಇದು ದೇವರ ಕೃಪೆಯ ವಾಕ್ಯದ ಮೂಲಕ ಸಾಧಿಸಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 20:32).

ತಮ್ಮ ಪಾಪಗಳಲ್ಲಿ ಸಾಯುವವರು ಯೇಸುವಿನ ಸಂಗಡ ಇರುವದಕ್ಕಾಗಿ ಪರಲೋಕವನ್ನು ಪ್ರವೇಶಿಸಲಾರರು (ಯೋಹಾನ 8:21). ದೇವರ ಪರಲೋಕ ಪಟ್ಟಣದೊಳಗೆ ಹೊಲೆಯಾದ ಯಾವದೂ ಪ್ರವೇಶಿಸಲಾಗದು (ಪ್ರಕಟನೆ 21:27). ಪಾಪಿಗಳು ಕ್ಷಮಿಸಲ್ಪಡುವ ಹೊರತು, ಅವರು ಬೆಳಕಿನ ರಾಜ್ಯದೊಳಗಿನ ದೇವಜನರೊಂದಿಗೆ ಯೋಗ್ಯರಾಗುವದಕ್ಕೆ ಸಾಧ್ಯವಿಲ್ಲ. ಆತನಲ್ಲಿ ಇರುವವರ (2 ಕೊರಿಂಥ 5:21; ಎಫೆಸ 1:7) ಪಾಪಗಳನ್ನು ಯೇಸುವಿನ ರಕ್ತವು ಪರಿಹರಿಸುವದು (1 ಯೋಹಾನ 1:7) – ಅಂದರೆ, ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ದೇವರ ಮಕ್ಕಳಾಗುವವರು (ಗಲಾತ್ಯ 3:26, 27). ಹೀಗೆ ಆತನು ಪಾಪಿಗಳನ್ನು ನೀತಿವಂತರನ್ನಾಗಿ ಮಾಡುವನು ಮತ್ತು ಅವರನ್ನು ಇಲ್ಲಿ ಹೇಳಲಾಗಿರುವ ಬಾಧ್ಯತೆಯನ್ನು ಪಡೆದುಕೊಳ್ಳುವಂತೆ ಯೋಗ್ಯರನ್ನಾಗಿ ಮಾಡುವನು.

ಈ ಬಾಧ್ಯತೆಯನ್ನು ನಿಖರವಾಗಿ ಯಾರು ಪಡೆದುಕೊಳ್ಳಲಿರುವರು? *The Greek New Testament* ನ ನಾಲ್ಕನೆಯ ತಿದ್ದಲ್ಪಟ್ಟಿರುವ ಆವೃತ್ತಿಯು ವ್ಯತ್ಯಾಸವಾದ ಪದವನ್ನು ಬಳಸುತ್ತದೆ, ಮೂಲಗ್ರಂಥದ ಹೆಚ್ಚಿನ ಪ್ರಮಾಣ ಹೊಂದಿದ್ದಾಗಿ "ನಮ್ಮನ್ನು" (NASB) ಎಂಬುದರ ಬದಲಾಗಿ "ನಿಮ್ಮನ್ನು" ಯೋಗ್ಯರನ್ನಾಗಿಸಿದ ಎಂದು ಬಳಸುತ್ತದೆ (NIV ಯಿಂದ ಸಹ ಅಂಗೀಕರಿಸಲ್ಪಟ್ಟಿದೆ).[10] "ನಿಮ್ಮನ್ನು" ಎಂಬುದು ಯೋಗ್ಯರನ್ನಾಗಿ ಮಾಡಲ್ಪಟ್ಟವರು ಕೇವಲ ಕೊಲೊಸ್ಸೆಯವರಷ್ಟೆ ಎಂದು ಮೀತಿಗೊಳಿಸಿರುತ್ತಿತ್ತು, – "ನಮ್ಮನ್ನು" ಎಂಬುದು ಅವರನ್ನು ಮಾತ್ರವಲ್ಲದೆ ಪೌಲ ಮತ್ತು ಎಲ್ಲಾ ಕ್ರೈಸ್ತರನ್ನು ಸಹ ಒಳಗೊಂಡಿರುವದಾಗಿರುತ್ತದೆ. ಎರಡರಲ್ಲಿ ಯಾವದನ್ನು ಬಳಸಿದರೂ ಅರ್ಥವೂ ಅಷ್ಟಾಗಿ ಬಾಧಿಸಲ್ಪಡುವದಿಲ್ಲ, ಯಾಕೆಂದರೆ ಕೊಲೊಸ್ಸೆಯವರು ಒಟ್ಟಾರೆ ಕ್ರೈಸ್ತರ ಪ್ರತಿನಿಧಿಗಳಾಗಿದ್ದರು.

"ಪಾಲುಗಾರರಾಗುವದಕ್ಕೆ" ಎಂಬದಕ್ಕಾಗಿರುವ ಗ್ರೀಕ್ ಪದವು, μερίδα (*merida*, μερίς, *meris* ಎಂಬುದರ ದ್ವಿತೀಯಾ ವಿಭಕ್ತಿಯ ಏಕವಚನ ಆಗಿರುತ್ತದೆ), ಅದು ಸಾಮಾನ್ಯವಾಗಿ ಭೂಮಿಯ ಭಾಗಗಳನ್ನು ಪಾಲು ಮಾಡುವದು ಅಥವಾ ಭಾಗಗಳಾಗಿ ವಿಭಜಿಸಲ್ಪಡುವಂತಹ ಇತರ ಸ್ವತ್ತುಗಳ ಸನ್ನಿವೇಶದಲ್ಲಿ ಬಳಸಲ್ಪಡುತ್ತದೆ (ಲೂಕ 10:42; ಅಪೊಸ್ತಲರ ಕೃತ್ಯಗಳು 8:21; 16:12). "ಬಾಧ್ಯತೆ" (κλῆρος, *klēros*) ಎಂಬುದು ಮೂಲತಃ ಒಂದು ಗುರುತಿಸಲ್ಪಟ್ಟ ವಸ್ತು ಅಥವಾ ಕೊಡಬೇಕೆಂದು ನಿಗದಿಪಡಿಸಲ್ಪಟ್ಟ ಮೊತ್ತ ಎಂಬ ಅರ್ಥವನ್ನು ಹೊಂದಿತ್ತು. ಅಲ್ಲದೆ ಅದು ಹಾಕಲ್ಪಟ್ಟಿರುವ "ಚೀಟುಗಳು" (ಮತ್ತಾಯ 27:35;

ಮಾರ್ಕ 15:24; ಲೂಕ 23:34; ಯೋಹಾನ 19:24; ಅಪೊಸ್ತಲರ ಕೃತ್ಯಗಳು 1:26), ಸೇವೆಯಲ್ಲಿ ಒಂದು ಪಾಲು ಅಥವಾ ಪಾತ್ರ ಹೊಂದಿರುವದು (ಅಪೊಸ್ತಲರ ಕೃತ್ಯಗಳು 1:17), ಮತ್ತು ಒಂದು ಹಂಚುವಿಕೆ ಅಥವಾ ಬಾಧ್ಯತೆ ಎಂಬದನ್ನು ಸೂಚಿಸಲು ಸಹ ಬಳಸಲ್ಪಡುತ್ತಿತ್ತು (ಅಪೊಸ್ತಲರ ಕೃತ್ಯಗಳು 26:18; 1 ಪೇತ್ರ 5:3).

ಹೊಸ ಒಡಂಬಡಿಕೆಯಲ್ಲಿ ವಾಗ್ದಾನ ಮಾಡಲ್ಪಟ್ಟಿರುವ ಬಾಧ್ಯತೆಯು ಮೊದಲನೆಯ ಒಡಂಬಡಿಕೆಯಲ್ಲಿ ವಾಗ್ದಾನ ಮಾಡಲ್ಪಟ್ಟದ್ದಕ್ಕಿಂತಲೂ ಉತ್ತಮವಾದದ್ದು (ಇಬ್ರಿಯ 8:6). ಹಳೆಯ ಒಡಂಬಡಿಕೆಯು (ವಿಮೋಚನಕಾಂಡ 32:13; ಅರಣ್ಯಕಾಂಡ 26:53) ಮುಖ್ಯವಾಗಿ ಭೂಲೋಕದ ಆಶೀರ್ವಾದಗಳನ್ನು ಮತ್ತು ಸ್ವತ್ತುಗಳನ್ನು ಒಳಗೊಂಡಿತ್ತು (ಧರ್ಮೋಪದೇಶಕಾಂಡ 5:32, 33). ಹೊಸ ಒಡಂಬಡಿಕೆಯಲ್ಲಿ ಮೊದಲು ದೇವರ ರಾಜ್ಯವನ್ನು ಹುಡುಕುವವರಿಗೆ ಇಹಜೀವನದ ಪೋಷಣೆಯ ವಾಗ್ದಾನ ಮಾಡಲ್ಪಟ್ಟಿರುತ್ತದೆ (ಮತ್ತಾಯ 6:33); ಆದರೆ, ಹೆಚ್ಚು ಪ್ರಾಮುಖ್ಯವಾಗಿ, ಆತ್ಮೀಕ ಮತ್ತು ಪರಲೋಕದ ಆಶೀರ್ವಾದಗಳು ವಾಗ್ದಾನ ಮಾಡಲ್ಪಟ್ಟಿವೆ (ಎಫೆಸ 1:3; 1 ತಿಮೊಥೆ 4:8). ಹೊಸದಾಗಿ ಹುಟ್ಟಿದವರಿಂದ ಪರಲೋಕವು ಒಂದು ಭಾಧ್ಯತೆಯಾಗಿ ಪಡೆದುಕೊಳ್ಳಲ್ಪಡುತ್ತದೆ (1 ಪೇತ್ರ 1:3, 4). ಒಂದು ಬಾಧ್ಯತೆಯು ಸಾಮಾನ್ಯವಾಗಿ ಸಂಪಾದಿಸಿಕೊಳ್ಳಲ್ಪಡದ್ದು ಅಥವಾ ಅರ್ಹತೆಗಳಿಂದ ಪಡೆದುಕೊಳ್ಳಲ್ಪಡದ್ದು ಆಗಿರುತ್ತದೆ. ಅದು ಕೊಡುವಾತನ ಇಚ್ಛೆಯ ಅನುಸಾರವಾಗಿ ಕೊಡಲ್ಪಡುತ್ತದೆ ಮತ್ತು ಸಾಮಾನ್ಯವಾಗಿ ಒಂದು ಲಿಖಿತ ಉಯಿಲಿನಲ್ಲಿ ಕೊಡಲ್ಪಡುತ್ತದೆ. ಮೊದಲ ಒಡಂಬಡಿಕೆಯ ವಿಷಯದಲ್ಲಿ ಅದು ಅಷ್ಟೆ ಸತ್ಯವಾಗಿತ್ತು ಮತ್ತು ಎರಡನೆಯ ಒಡಂಬಡಿಕೆಯ ವಿಷಯದಲ್ಲಿಯೂ ಅದು ಸತ್ಯವಾಗಿರುತ್ತದೆ (ಇಬ್ರಿಯ 9:15). ಮಾನವ ಕುಟುಂಬಗಳಲ್ಲಿ ಸಾಮಾನ್ಯವಾಗಿ ಮಕ್ಕಳು ಬಾಧ್ಯತೆಯನ್ನು ಪಡೆಯುವ ಬಾಧ್ಯಸ್ಥರಾಗಿರುತ್ತಾರೆ.

ಯಾರು ಮಕ್ಕಳಾಗಿದ್ದಾರೋ ಅವರಿಗೆ ಬಾಧ್ಯತೆಯು ಕೊಡಲ್ಪಡುತ್ತದೆ (ರೋಮಾ 8:16, 17; ಗಲಾತ್ಯ 4:6, 7), ಯಾಕೆಂದರೆ ಪರಲೋಕದ ಬಾಧ್ಯತೆಯನ್ನು ಪಡೆದುಕೊಳ್ಳುವದಕ್ಕೆ ಅವರು ಮಾತ್ರವೇ ಯೋಗ್ಯರಾಗಿರುತ್ತಾರೆ. ಜನರು ದೇವರ ಮಕ್ಕಳಾಗುವದಕ್ಕೆ ದಾರಿಗಳಾಗಿ ಜನನ (1 ಪೇತ್ರ 1:3) ಮತ್ತು ದತ್ತುಸ್ವೀಕಾರ ಎರಡೂ (ರೋಮಾ 8:15; ಗಲಾತ್ಯ 4:5; ಎಫೆಸ 1:5) ಇರುತ್ತವೆ. ದೇವರ ಮಗುವಾಗುವದಕ್ಕೆ ಒಂದು ಹೊಸ ಜನ್ಮವು ಅಗತ್ಯವಿರುತ್ತದೆ. ಈ ಜನನವು ನೀರಿನಿಂದಲೂ ಆತ್ಮನಿಂದಲೂ ಉಂಟು ಮಾಡಲ್ಪಡುತ್ತದೆ ಎಂದು ಯೇಸು ವಿವರಿಸಿದನು (ಯೋಹಾನ 3:5). ಪವಿತ್ರಾತ್ಮನಿಂದ ಪ್ರಕಟಗೊಂಡ ವಾಕ್ಯದ ಮೂಲಕ (ಯೋಹಾನ 6:63; 1 ಪೇತ್ರ 1:23) — ಅದು ನಂಬಿಕೆಗೆ ಆಧಾರವಾಗಿದ್ದು (ರೋಮಾ 10:17) — ಮತ್ತು ನೀರಿನ ದೀಕ್ಷಾಸ್ನಾನದ ಮೂಲಕ, ಜನರು ದೇವರ ಮಕ್ಕಳಾಗಿ ಮಾಡಲ್ಪಡುತ್ತಾರೆ (ಗಲಾತ್ಯ 3:26, 27). ಅದಕ್ಕೊಂದು ಉದಾಹರಣೆಯು ಅಪೊಸ್ತಲರ ಕೃತ್ಯಗಳು 8:12ರಲ್ಲಿ ಕೊಡಲ್ಪಟ್ಟಿದೆ: "ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವಾರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು."

ಪವಿತ್ರಾತ್ಮನಿಂದ ಪ್ರಕಟಿಸಲ್ಪಟ್ಟ ವಾಕ್ಯದ ಮೂಲಕ ಹೊಸದಾಗಿ ಹುಟ್ಟಿರುವವರು (ಯೋಹಾನ 14:26) **ದೇವಜನರು** ಎಂದು ಕರೆಯಲ್ಪಟ್ಟಿದ್ದಾರೆ. ಈ ಪದದ ಸಜಾತೀಯ

ಕ್ರಿಯಾಪದ (ἅγιοι, *hagioi*) ಎಂಬುದರ ಅರ್ಥವು "ಪರಿಶುದ್ಧಗೊಳಿಸು" (ἁγιάζω, *hagiazō*) ಎಂದರ್ಥವಾಗಿರುತ್ತದೆ. ದೇವಜನರು ವಾಕ್ಯದಿಂದ ಪ್ರತಿಷ್ಠಿಸಲ್ಪಡುತ್ತಾರೆ (ಯೋಹಾನ 17:17) ಮತ್ತು ಅವರು **ಬೆಳಕಿನ** ಮಕ್ಕಳಾಗಿದ್ದಾರೆ. ಯೇಸುವಿನ ಹಿಂಬಾಲಕರು ಲೋಕಕ್ಕೆ ಬೆಳಕಕಾಗಿದ್ದಾರೆ (ಮತ್ತಾಯ 5:14). ನಾವು ಲೋಕಕ್ಕೆ ಬೆಳಕಾಗಿರುವಾತನಿಂದ ಬೆಳಕನ್ನು ಪಡೆದುಕೊಂಡಿರುವದರಿಂದ, ನಾವು ಬೆಳಕಾಗಿರುತ್ತೇವೆ (ಯೋಹಾನ 3:21; 8:12). ಬೆಳಕಿನ ಮಕ್ಕಳಾಗಿ (ಯೋಹಾನ 12:36; ನೋಡಿರಿ 1 ಥೆಸಲೋನಿಕ 5:5), ನಮ್ಮಲ್ಲಿ ಜೀವ ಕೊಡುವ ಬೆಳಕು ಇರುತ್ತದೆ (ಯೋಹಾನ 8:12).

"ಬೆಳಕಿನ ರಾಜ್ಯದೊಳಗೆ ದೇವಜನರು" ಎಂದರೆ ಯಾರು? ಅವರು ಭೂಮಿಯ ಜೀವಿಗಳೋ ಅಥವಾ ದೇವದೂತರೋ? "ದೇವಜನರು" ಎಂಬದಕ್ಕಾಗಿರುವ ಅದೇ ಗ್ರೀಕ್ ಪದವು ಕೆಲವು ಸಾರಿ "ಪರಿಶುದ್ಧ" ಎಂದು ಸಹ ಅನುವಾದಿಸಲ್ಪಡುತ್ತದೆ. ಅದು ಹಳೆಯ ಒಡಂಬಡಿಕೆಯ ಕಾಲದ ವೇಳೆಯಲ್ಲಿನ ದೇವರ ಜನರನ್ನು ಸೂಚಿಸಬಹುದು (ಮತ್ತಾಯ 27:52), ಯೇಸುವಿನ ಹಿಂಬಾಲಕರನ್ನು ಸೂಚಿಸಬಹುದು (ಅಪೊಸ್ತಲರ ಕೃತ್ಯಗಳು 9:13, 32; ರೋಮಾ 8:27; 12:13), ಅಥವಾ ದೇವದೂತರನ್ನು ಸೂಚಿಸಬಹುದು (ಮಾರ್ಕ 8:38; ಲೂಕ 9:26; ಅಪೊಸ್ತಲರ ಕೃತ್ಯಗಳು 10:22). ಬಹಳ ಸಂಭಾವ್ಯವಾಗಿ, ಪೌಲನು ಪರಲೋಕದ ಬಾಧ್ಯತೆಯನ್ನು ಸ್ವೀಕರಿಸುವಂತಹ ಎಲ್ಲಾ ಯುಗಗಳಲ್ಲಿ ರಕ್ಷಿಸಲ್ಪಟ್ಟವರನ್ನು ಸೂಚಿಸಿ ಹೇಳುತ್ತಿದ್ದಾನೆ. ಇದರಲ್ಲಿ ಧರ್ಮಶಾಸ್ತ್ರದ ಮುಂಚೆ ದೇವರನ್ನು ಗೌರವಿಸಿದ ಜನರು, ಮೋಶೆಯ ಧರ್ಮಶಾಸ್ತ್ರದ ಕಾಲದಲ್ಲಿನ ಯೆಹೂದ್ಯರು ಮತ್ತು ಅನ್ಯಜನರು, ಮತ್ತು ಕ್ರೈಸ್ತ ಯುಗದ ವೇಳೆ ರಕ್ಷಿಸಲ್ಪಟ್ಟವರು ಸೇರಿರುತ್ತಾರೆ. ಕ್ರಿಸ್ತನ ಪುನರುತ್ಥಾನದ ಮುಂಚೆ ಜೀವಿಸಿದ ಕೆಲವರು "ದೇವಜನರು" ಎಂದು ಕರೆಯಲ್ಪಟ್ಟರು (ಮತ್ತಾಯ 27:52). ಈ ಗುಂಪು ಮೊದಲ ಒಡಂಬಡಿಕೆಯ ಅಡಿಯಲ್ಲಿ ಯೇಸುವಿನ ಮರಣದ ಮೂಲಕ ವಿಮೋಚಿಸಲ್ಪಟ್ಟ ಜನರಾಗಿರಬಹುದಾಗಿದೆ (ಇಬ್ರಿಯ 9:15). ಅಲ್ಲದೆ ಇದರಲ್ಲಿ "ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು . . . ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ" ಹೊಂದಿರುವ ಅನ್ಯಜನರು ಸಹ ಸೇರುವರು (ಅಪೊಸ್ತಲರ ಕೃತ್ಯಗಳು 26:18). "ಪರಿಶುದ್ಧಗೊಳಿಸಲ್ಪಟ್ಟವರು" ಅಂದರೆ "ಪ್ರತ್ಯೇಕಿಸಲ್ಪಟ್ಟವರು, ಪವಿತ್ರಗೊಳಿಸಲ್ಪಟ್ಟವರು, ದೇವಜನರಾಗಿ ಮಾಡಲ್ಪಟ್ಟವರು" ಎಂದರ್ಥವಾಗಿದೆ.

ಬೆಳಕನ್ನು ಕತ್ತಲೆಗೆ ವಿರುದ್ಧ ಹೋಲಿಸತಕ್ಕದ್ದು. ಅವೆರಡು ಒಂದೇ ಸ್ಥಳದಲ್ಲಿ ಇರುವದಕ್ಕೆ ಸಾಧ್ಯವಿಲ್ಲ. ಬೆಳಕು ಕತ್ತಲೆಯನ್ನು ಓಡಿಸುವದು. ದೇವರಲ್ಲಿ ಯಾವ ಕತ್ತಲೆಯೂ ಇಲ್ಲ, ಯಾಕೆಂದರೆ ದೇವರು ಬೆಳಕಾಗಿದ್ದಾನೆ (1 ಯೋಹಾನ 1:5).

## "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ" (1:13)

ಪೌಲನು ಬೆಳಕು ಮತ್ತು ಕತ್ತಲೆಗಳ ನಡುವೆ ವಿರುದ್ಧ ಹೋಲಿಕೆ ಮಾಡುವದನ್ನು ಮುಂದುವರೆಸುತ್ತಾ ಕ್ರೈಸ್ತರು **ಅಂಧಕಾರದ ದೊರೆತನದಿಂದ ಬಿಡಿಸ**ಲ್ಪಟ್ಟಿದ್ದಾರೆ ಎಂದು ಹೇಳುತ್ತಾನೆ. "ಬಿಡಿಸಿ" (ῥύομαι, *hruomai*) ಎಂಬುದು ಕೇಡಿನಿಂದ (ಮತ್ತಾಯ 6:13), ಶಾರೀರಿಕ ಮರಣ (ಮತ್ತಾಯ 27:43; 2 ಕೊರಿಂಥ 1:10), ಪಾಪದಲ್ಲಿನ ಮರಣ (ರೋಮಾ 7:24), ಬರಲಿರುವ ಕೋಪಾಗ್ನಿಯಿಂದ (1 ಥೆಸಲೋನಿಕ 1:10), ಮತ್ತು ಶೋಧನೆಯಿಂದ (2 ಪೇತ್ರ 2:9) ಬಿಡಿಸಲ್ಪಡುವದನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ. ಇದರ ಮೂಲಭೂತ

ಅರ್ಥವು ಸೆರೆಯಾಳುಗಳಾಗಿ ಹಿಡಿದಿಟ್ಟುಕೊಳ್ಳಲ್ಪಟ್ಟವರನ್ನು ಕಾಪಾಡುವದು ಎಂದಾಗಿರುತ್ತದೆ. "ನಮ್ಮನ್ನು ಯೋಗ್ಯರನ್ನಾಗಿ ಮಾಡಿದನು" ಮತ್ತು "ನಮ್ಮನ್ನು ಬಿಡಿಸಿದನು" ಎಂಬವುಗಳು ಒಂದೇ ಕಾಲವನ್ನು ಸೂಚಿಸುತ್ತವೆ. ಯೋಗ್ಯರಾಗಿ ಮಾಡಲ್ಪಡುವದರಲ್ಲಿ ಕೊಲೊಸ್ಸೆಯವರು ಬಿಡಿಸಲ್ಪಟ್ಟವರು ಸಹ ಆಗಿದ್ದರು. ಬಾಧ್ಯತೆಯನ್ನು ಹೊಂದಿಕೊಳ್ಳಲು ಯೋಗ್ಯರಾಗಿ ಮಾಡಲ್ಪಟ್ಟವರು – ಅಂಧಕಾರದ ದೊರೆತನದಿಂದ ಬಿಡಿಸಲ್ಪಟ್ಟವರೇ ಆಗಿದ್ದಾರೆ.

12 ಮತ್ತು 13 ವಚನಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಕ್ರಿಯೆಗಳು – "ಯೋಗ್ಯರನ್ನಾಗಿ ಮಾಡಿದ," "ಬಿಡಿಸಿ," ಮತ್ತು "ಸೇರಿಸಿದನು" – ಎಂಬವುಗಳು ಯೇಸುವಿನ ರಾಜ್ಯದೊಳಗೆ ಪ್ರವೇಶಿಸುವವರನ್ನು ವರ್ಣಿಸುವಿಕೆಗಳಾಗಿವೆ. ಯೇಸುವೇ ರಕ್ಷಕನು; ಆತನಿಲ್ಲದೆ ಯಾರೊಬ್ಬನೂ ಯೋಗ್ಯನಾಗಿ ಮಾಡಲ್ಪಡಲಾರನು ಮತ್ತು ಬಿಡಿಸಲ್ಪಡಲಾರನು. ಪಾಪಿಗಳು ತಮ್ಮನ್ನು ತಮ್ಮ ಪಾಪಸ್ಥಿತಿಯೊಳಗಿಂದ ಬಿಡಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ. ಅವರು ಇದನ್ನು ಮಾಡುವದಕ್ಕೆ ಶಕ್ತರಾಗಿದ್ದಲ್ಲಿ, ಯೇಸುವು ಅವರನ್ನು ರಕ್ಷಿಸುವದಕ್ಕಾಗಿ ಬರಬೇಕಾಗಿರಲಿಲ್ಲ. ದೇವರು, ಯೇಸುವಿನ ಮೂಲಕ, ನಂಬಿಕೆಯಿಂದ ಯೇಸುವಿಗೆ ವಿಧೇಯರಾಗುವವರನ್ನು ರಕ್ಷಿಸಿದನು (ಇಬ್ರಿಯ 5:9).

13 ವಚನದಲ್ಲಿ, ಪೌಲನು ಅಂಧಕಾರದಲ್ಲಿರುವವರನ್ನು ಒಬ್ಬ ವೈರಿಯಿಂದ ಬಂಧಿಗಳಾಗಿ ಇಟ್ಟುಕೊಳ್ಳಲ್ಪಟ್ಟವರಿಗೆ ಹೋಲಿಕೆ ಮಾಡಿದನು. ಅವರು ತಮ್ಮನ್ನು ದಾಸರನ್ನಾಗಿ ಮಾಡಿಕೊಂಡು ಬಂಧಿಗಳನ್ನಾಗಿಟ್ಟುಕೊಳ್ಳುವಂತೆ ವೈರಿಗೆ ಅವಕಾಶ ಕೊಟ್ಟಿರುತ್ತಾರೆ. ದೇವರು ಸೈತಾನನಿಗೆ ದಾಸರಾಗಿರುವವರನ್ನು ಅವರ ಬಂಧನದಿಂದ ಬಿಡಿಸಿ ತನ್ನ ರಾಜ್ಯದೊಳಗೆ ಸೇರಿಸಲು ಶಕ್ತನಾಗಿದ್ದಾನೆ.

ದೇವರು ನಮ್ಮನ್ನು "ಅಂಧಕಾರದ ದೊರೆತನದಿಂದ ಬಿಡಿಸಿದನು" ಎಂಬುದರಲ್ಲಿ ತನ್ನನ್ನು ಸೇರಿಸಿಕೊಂಡನು. "ದೊರೆತನ" (ἐξουσία, *exousia*) ಎಂಬುದು ಅಪೊಸ್ತಲರ ಕೃತ್ಯಗಳು 26:18ರಲ್ಲಿ ಬಳಸಲ್ಪಟ್ಟಿರುವ ಅದೇ ಪದವಾಗಿರುತ್ತದೆ (1:11ರ ಮೇಲಿನ ಚರ್ಚೆಯನ್ನು ನೋಡಿರಿ). ಬೆಳಕಿಗೆ ತದ್ವಿರುದ್ಧವಾದ, "ಅಂಧಕಾರ," ಪಾಪಭರಿತ ಸಂಗತಿಗಳಿಗೆ ಒಂದು ಎಲ್ಲವನ್ನು ಒಳಗೊಂಡ ಪದವಾಗಿರುತ್ತದೆ; ಅದು ಬೆಳಕಿನೊಂದಿಗೆ ಹೊಂದಿಕೆಯಿಲ್ಲದ್ದಾಗಿದೆ. ಪೌಲನು ಹೀಗೆ ಬರೆದನು,

> ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? (2 ಕೊರಿಂಥ 6:14-16).

ಬೆಳಕಿನ ಅನುಪಸ್ಥಿತಿಯು ಮತ್ತು ಬೆಳಕಿಗೆ ತದ್ವಿರುದ್ಧವಾದದ್ದು ಅಂಧಕಾರವಾಗಿದೆ. ದೇವರು ಬೆಳಕಿನಲ್ಲಿ ವಾಸಿಸುತ್ತಾನೆ (1 ತಿಮೊಥೆ 6:16), ಹೊರತು ಕತ್ತಲೆಯಲ್ಲಿ ಅಲ್ಲ. ಅಂಧಕಾರದ ದೊರೆತನವು ಪಾಪದ (ಯೋಹಾನ 3:19), ವಂಚನೆ (2 ಕೊರಿಂಥ 11:13-15), ಮತ್ತು ಅಜ್ಞಾನದ (ಎಫೆಸ 4:18) ಮಂಡಲವಾಗಿದೆ. ಈ ಮಂಡಲವು ಸೈತಾನನ ನಿಯಂತ್ರಣದಲ್ಲಿರುತ್ತದೆ; ಆತನು ನಂಬಿಕೆಯಿಲ್ಲದವರ ಹೃದಯಗಳಲ್ಲಿ ಸುವಾರ್ತೆಯ ಬೆಳಕು

ಪ್ರಕಾಶಿಸದಂತೆ ತಡೆಯಲು ಅವರನ್ನು ಮಂಕು ಮಾಡುತ್ತಾನೆ (2 ಕೊರಿಂಥ 4:4). ಕ್ರೈಸ್ತರಲ್ಲದವರು ಅಂಧಕಾರದಲ್ಲಿಯೇ ಉಳಿದುಕೊಳ್ಳುತ್ತಾರೆ (ಎಫೆಸ 5:8), ಆದರೆ ಅವರು ಎಷ್ಟರ ಮಟ್ಟಿಗೆ ಅವಕಾಶ ಕೊಡುತ್ತಾರೋ ಅಷ್ಟರ ಮಟ್ಟಿಗೆ ಮಾತ್ರವೇ ಅಂಧಕಾರಕ್ಕೆ ಅವರ ಮೇಲೆ ಅಧಿಕಾರವಿರುತ್ತದೆ. ಕ್ರೈಸ್ತರು ಅಂಧಕಾರದಲ್ಲಿರುವವರಲ್ಲ (1 ಥೆಸಲೋನಿಕ 5:4) ಮತ್ತು ಅವರು ಕತ್ತಲೆಯ ಕೃತ್ಯಗಳೊಂದಿಗೆ ಅನ್ಯೋನ್ಯತೆಯಿಟ್ಟುಕೊಳ್ಳಬಾರದು.

ಇಹಲೋಕವನ್ನು ದೊರೆತನ ಮಾಡುವವನು ಮತ್ತು ಇಹಲೋಕದ ದೇವರು ಆಗಿರುವ ಸೈತಾನನು (ಯೋಹಾನ 12:31; 14:30; 16:11; 2 ಕೊರಿಂಥ 4:4), ತನ್ನ ಅಂಧಕಾರದ ಮಂಡಲದಲ್ಲಿರುವವರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾನೆ. ಅವರು ಲೋಕದ ಎಲ್ಲಾ ದುಷ್ಟ ಸಂಗತಿಗಳ ಜೊತೆಯಲ್ಲಿ (1 ಯೋಹಾನ 5:19), ಅಂಧಕಾರದ ಅಧಿಕಾರದಡಿಯಲ್ಲಿ ಇರುತ್ತಾರೆ (ಲೂಕ 22:53). ಯೇಸು ಹೀಗೆ ಹೇಳಿದನು, “ಪಾಪ ಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ” (ಯೋಹಾನ 8:34). “ಮಾಡುವ,” ಗ್ರೀಕ್‌ನಲ್ಲಿ ಒಂದು ವರ್ತಮಾನಕಾಲ ಕೃದಂತವಾಗಿದ್ದು, ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ನಿರಂತರವಾಗಿ ಪಾಪವನ್ನು ಮಾಡುವ ವ್ಯಕ್ತಿಯು ಅದಕ್ಕೆ ದಾಸನಾಗುವನು.

ಪೌಲನು ಅದನ್ನ ಈ ರೀತಿಯಾಗಿ ಹೇಳುತ್ತಾನೆ:

> ನೀವು ಯಾವನಿಗೆ ದಾಸರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿ ಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; [ನಂಬಿಕೆಯೆಂಬ] ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ (ರೋಮಾ 6:16).

ಪೇತ್ರನು ಅದೇ ಆಲೋಚನೆಯನ್ನು ವ್ಯಕ್ತಪಡಿಸುತ್ತಾನೆ: “. . . ಒಬ್ಬನು ಯಾವದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ” (2 ಪೇತ್ರ 2:19). ಪಾಪಕ್ಕೆ ಮತ್ತು ಸೈತಾನನಿಗೆ ಒಪ್ಪಿಸಿಕೊಳ್ಳುವ ಮೂಲಕ, ಜನರು ಆತನ ಚಿತ್ತವನ್ನು ಮಾಡುವಂತೆ ದಾಸತ್ವದೊಳಗೆ ಹಿಡಿದಿಟ್ಟುಕೊಳ್ಳಲ್ಪಡುತ್ತಾರೆ (2 ತಿಮೊಥೆ 2:26).

ರೋಮಾಪುರದವರಿಗೆ ಪತ್ರಿಕೆಯಲ್ಲಿ, ಪೌಲನ ಪಾಪದ ದೊರೆತನ ಮಾಡುವ ಪರಿಣಾಮದ ಬಗ್ಗೆ ಬರೆದನು, ಪಾಪಿಗಳು “ಪಾಪದ ಸ್ವಾಧೀನದಲ್ಲಿರುವದಕ್ಕೆ ಮಾರಲ್ಪಟ್ಟವರು” ಎಂದು ವಿವರಿಸುತ್ತಾನೆ (7:14). ಅವರು ತಾವು “ಮಾಡಬೇಕೆಂದು ಇಚ್ಛಿಸುತ್ತಾರೋ” ಅದನ್ನು “ಮಾಡದವರಾಗಿರುತ್ತಾರೆ,” ಆದರೆ ಅದರ ಬದಲಿಗೆ ತಾವು “ಅಸಹ್ಯಪಡುವದನ್ನು” ಮಾಡುತ್ತಾರೆ (7:15). ಅವರ ಜೀವಿತಗಳಲ್ಲಿ ಹತೋಟಿ ಮಾಡುವಂತದ್ದು ಅವರಲ್ಲಿ “ನೆಲೆಗೊಂಡಿರುವ ಪಾಪವೇ” ಆಗಿರುತ್ತದೆ (7:20). ದೇವರು ಯೇಸು ಕ್ರಿಸ್ತನ ಮೂಲಕವಾಗಿ, ಸೈತಾನನ ಅಧಿಕಾರಗಳಿಂದ ಮತ್ತು ಆತ್ಮೀಕ ಮರಣದ ದಾಸತ್ವದಲ್ಲಿರುವವರನ್ನು ಬಿಡುಗಡೆಗೊಳಿಸುತ್ತಾನೆ (7:24, 25). ಆತನು ಅವರನ್ನು ಅಂಧಕಾರದ ದೊರೆತನದಿಂದ ಬಿಡಿಸುತ್ತಾನೆ, ಮತ್ತು ಯೇಸುವಿನ ರಾಜ್ಯವಾದ ಬೆಳಕಿನ ಆಳ್ವಿಕೆಯೊಳಗೆ ಸೇರಿಸುತ್ತಾನೆ.

ಕ್ರೈಸ್ತರು ಅಂಧಕಾರದ ಅಧಿಕಾರಗಳು, ಲೋಕಾಧಿಪತಿಗಳು ಮತ್ತು ಸೇನೆಗಳ ವಿರುದ್ಧ ಹೋರಾಟ ಮಾಡಬೇಕಾಗಿರುತ್ತದೆ (ಎಫೆಸ 6:12). ನಾವು ಇನ್ನು ಮೇಲೆ ಕತ್ತಲೆಗೆ ಸಂಬಂಧಿಸಿದ ಕೃತ್ಯಗಳಲ್ಲಿ ತೊಡಗಿಸಿಕೊಳ್ಳಬಾರದು (ಎಫೆಸ 5:11). ಬದಲಾಗಿ, ನಾವು

ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳಬೇಕು (ರೋಮಾ 13:12). ದೇವರ ಸಂಗಡ ಅನ್ಯೋನ್ಯತೆ ಹೊಂದಿರಬೇಕೆಂದರೆ, ನಾವು ಕತ್ತಲೆಯಲ್ಲಿ ನಡೆಯದೆ ಬೆಳಕಿನಲ್ಲಿ ನಡೆಯುವವರಾಗಿರಬೇಕು, ಯಾಕೆಂದರೆ ದೇವರಲ್ಲಿ ಕತ್ತಲೆಯಿರುವದಿಲ್ಲ (1 ಯೋಹಾನ 1:5-7). ಬೆಳಕಿಗಿಂತಲೂ ಕತ್ತಲೆಯನ್ನೇ ಪ್ರೀತಿಸುವವರು ದುಷ್ಟರಾಗಿದ್ದಾರೆ (ಯೋಹಾನ 3:19). ನ್ಯಾಯತೀರ್ಪಿನ ದಿನದಂದು, ಕತ್ತಲೆಯಲ್ಲಿರು ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು (1 ಕೊರಿಂಥ 4:5).

ಯೇಸು ಪೌಲನಿಗೆ ತಾನು ಅವನನ್ನು ಅನ್ಯಜನರ ಬಳಿಗೆ "ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು . . . ಅವರ ಕಣ್ಣುಗಳು ತೆರೆಯಬೇಕೆಂದು" ನಾನು ನಿನ್ನನ್ನು ಕಳುಹಿಸುತ್ತೇನೆ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 26:18a). ಯಾರು ತಮ್ಮ ಕಣ್ಣುಗಳನ್ನು ತೆರೆಯುತ್ತಾರೋ ಅವರು "ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ" ಹೊಂದಿಕೊಳ್ಳುವರು (ಅಪೊಸ್ತಲರ ಕೃತ್ಯಗಳು 26:18b). ಪಂಚಾಶತ್ತಮ ದಿನದಂದು ಪೇತ್ರನು ಮಾಡಿದ ಪ್ರಸಂಗದ ಪ್ರಕಾರ, ವಿಶ್ವಾಸಿಗಳು ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಪಾಪಪರಿಹಾರವನ್ನು ಪಡೆಯುತ್ತಾರೆ (ಅಪೊಸ್ತಲರ ಕೃತ್ಯಗಳು 2:38). ಒಬ್ಬನು ಕ್ಷಮಿಸಲ್ಪಟ್ಟಾಗ, ಆತ್ಮದಿಂದಲೂ ನೀರಿನಿಂದಲೂ ಹೊಸದಾಗಿ ಹುಟ್ಟಿದವನಾಗಿರುವಾಗ (ಯೋಹಾನ 3:5), ಆತನು ದೇವರ ರಾಜ್ಯವನ್ನು ಪ್ರವೇಶಿಸುವವನಾಗಿದ್ದಾನೆ. ಈ ಸಂದರ್ಭದಲ್ಲಿಯೇ ಒಬ್ಬನು ಅಂಧಕಾರದ ದೊರೆತನವನ್ನು ತೊರೆದು ಬೆಳಕಿನ ಮಂಡಲದೊಳಗೆ ಪ್ರವೇಶಿಸುತ್ತಾನೆ.

ಪೌಲನು ಕ್ರೈಸ್ತರ ವಿಷಯದಲ್ಲಿ ಹೀಗೆ ಬರೆಯುತ್ತಾನೆ, "ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ" (ಎಫೆಸ 5:8); "ನೀವೆಲ್ಲರು ಬೆಳಕಿನವರೂ ಹಗಲಿನವರೂ ಆಗಿದ್ದೀರಷ್ಟೆ; ನಾವು ರಾತ್ರಿಯವರೂ ಅಲ್ಲ; ಕತ್ತಲೆಯವರೂ ಅಲ್ಲ" (1 ಥೆಸಲೋನಿಕ 5:5). ಪೇತ್ರನು ಸಹ ಕತ್ತಲೆ Vs ಬೆಳಕು ರೂಪಕೋಕ್ತಿಯನ್ನು ಬಳಸಿದನು. ಆತನು ಹೀಗೆ ಬರೆದನು, "ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ . . . ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ" (1 ಪೇತ್ರ 2:9-10).

## "ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" (1:13)

ಕ್ರೈಸ್ತರಿಂದ ಆನಂದಿಸಲ್ಪಡುವ ಇನ್ನೊಂದು ಆಶೀರ್ವಾದವು ಯಾವದೆಂದರೆ ದೇವರು ನಮ್ಮನ್ನು **ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದ್ದಾನೆ**. "ಸೇರಿಸಿದನು" μεθίστημι (*methistēmi*) ಎಂಬುದರ ಅರ್ಥವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡುವದು ಅಥವಾ ಒಂದು ವ್ಯತ್ಯಾಸವಾದ ದೃಷ್ಟಿಕೋನವನ್ನು ಅಂಗೀಕರಿಸಿಕೊಳ್ಳಲು ಮನವೊಲಿಸಲ್ಪಡುವದು ಎಂದಾಗಿರುತ್ತದೆ. ನಾಶನದಲ್ಲಿರುವವರು ಸೈತಾನನ ಮಕ್ಕಳಾಗಿದ್ದಾರೆ (ಮತ್ತಾಯ 13:38; 1 ಯೋಹಾನ 3:8, 10) ಮತ್ತು ಆತನ ಚಿತ್ತವನ್ನು ಮಾಡುವಂತೆ ಅತನ ನಿಯಂತ್ರಣದಲ್ಲಿ ಇರುವವರಾಗಿದ್ದಾರೆ (ಯೋಹಾನ 8:44; 2 ತಿಮೊಥೆ 2:26). ಹೇಗೂ, ಅವರನ್ನು ಆತನ ದೊರೆತನದಿಂದ ಬಿಡಿಸಿಕೊಂಡು ಯೇಸುವಿನ

ರಾಜ್ಯದ ಸದಸ್ಯರಾಗಿ ಆತನ ಆಳ್ವಿಕೆಯ ಅಡಿಯಲ್ಲಿ ತರಬಹುದಾಗಿದೆ. ಯೇಸುವಿನ ಮೂಲಕ, ಕ್ರೈಸ್ತರು ದೇವರ ಮೂಲಕ ಅಂಧಕಾರದ ದೊರೆತನ ಮಾಡುವ ಮಂಡಲದಿಂದ ಬಿಡುಗಡೆಗೊಳಿಸಿ ಕ್ರಿಸ್ತನ ರಾಜ್ಯದೊಳಗೆ ಸೇರಿಸಲ್ಪಡುತ್ತಾರೆ.

ತಂದೆಯು ಕೊಲೊಸ್ಸೆಯವರನ್ನು ವೈರಿಯಾದ ಪಿಶಾಚನ ಅಧಿಕಾರದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದ್ದನು. "ಬಿಡಿಸಿ" ಮತ್ತು "ಸೇರಿಸಿದನು" ಎರಡೂ ಸಹ ಗ್ರೀಕ್‌ನಲ್ಲಿ ಅನಿಶ್ಚಿತ ಭೂತಕಾಲ ರೂಪದಲ್ಲಿರುತ್ತವೆ: ಈ ಕ್ರೈಸ್ತರ ವಿಷಯದಲ್ಲಿ ಬಿಡಿಸುವ ಮತ್ತು ಸೇರಿಸುವ ಕಾರ್ಯಗಳು ಗತಕಾಲದಲ್ಲಿ ಸಂಭವಿಸಿದ್ದವು. ಪೌಲನು ಸೇರಿಸಲ್ಪಟ್ಟವರ ಜೊತೆಗೆ ತನ್ನನ್ನು ಸಹ ಸೇರ್ಪಡೆಗೊಳಿಸಿಕೊಂಡಿದ್ದನು. ಇದು "ಅವರು ದೀಕ್ಷಾಸ್ನಾನ ಮಾಡಿಸಿಕೊಂಡ ವೇಳೆ, ಅವರು ಕ್ರಿಸ್ತನನ್ನು ಅಂಗೀಕರಿಸಿಕೊಂಡಾಗ" ಸಂಭವಿಸಿತು ಎಂದು J. B. Lightfoot ಅಭಿಪ್ರಾಯ ಪಡುತ್ತಾನೆ.[11]

ತಂದೆ ಮತ್ತು ಮಗನ ನಡುವಿನ ಸಂಬಂಧವು ಮುಂದಿನ ಪದಗಳಲ್ಲಿ ತೋರಿಸಲ್ಪಟ್ಟಿರುತ್ತದೆ, "ತನ್ನ ಪ್ರಿಯ ಕುಮಾರನ" (ὁ υἱὸς τῆς ἀγάπης αὐτοῦ, *ho huios tēs agapēs autou*). ಅಕ್ಷರಶಃ, ಇದರರ್ಥವು "ಆತನಿಗೆ ಪ್ರೀತಿಯುಳ್ಳ ಮಗನ." ಅಲ್ಲೊಂದು ಪ್ರೀತಿಯ ಸಂಬಂಧವಿರುತ್ತದೆ. ಯೇಸುವಿನ ದೀಕ್ಷಾಸ್ನಾನದ ವೇಳೆಯಲ್ಲಿ, ದೇವರು ಆಕಾಶದಿಂದ ಮಾತಾಡಿ, "ಈತನ ಪ್ರೀತಿನಾಗಿರುವ ನನ್ನ ಕುಮಾರನು" ಎಂದು ಹೇಳಿದನು (ಮತ್ತಾಯ 3:17). ಯೇಸುವು ಪೇತ್ರ, ಯಾಕೋಬ, ಮತ್ತು ಯೋಹಾನರ ಮುಂದೆ ಪ್ರಕಾಶರೂಪವನ್ನು ಧರಿಸಿಕೊಂಡ ವೇಳೆ ಬೆಟ್ಟದ ಮೇಲೆ ಸಹ ದೇವರು ಈ ಮಾತುಗಳನ್ನು ಪುನರಾವರ್ತಿಸಿದನು (ಮತ್ತಾಯ 17:5). ತಂದೆಯು ನನ್ನನ್ನು ಪ್ರೀತಿಸುತ್ತಾನೆಂದು (ಯೋಹಾನ 3:35; 5:20; 10:17; 15:9; 17:23, 24, 26) ಮತ್ತು ತಾನು ತಂದೆಗೆ ವಿಧೇಯನಾಗುವ ನಿಮಿತ್ತ ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿರುತ್ತೇನೆಂದು ಯೇಸು ಕಲಿಸಿದನು (ಯೋಹಾನ 15:10). ಯೇಸು ದೇವರ ಪ್ರೀತಿಯ ಲಕ್ಷ್ಯ ಮಾತ್ರವೇ ಆಗಿರುವದಿಲ್ಲ ಆದರೆ ನಾಶನದಲ್ಲಿರುವ ಮಾನವರಿಗೆ ಆತನ ಪ್ರೀತಿಯ ವ್ಯಕ್ತಪಡಿಸುವಿಕೆ ಸಹ ಆಗಿರುತ್ತಾನೆ. ದೇವರು ತನ್ನ ಪ್ರೀತಿಯು ಎಷ್ಟು ದೊಡ್ಡದೆಂಬುದನ್ನು ತೋರ್ಪಡಿಸುವದಕ್ಕಾಗಿ ತನ್ನ ಒಬ್ಬನೇ ಮಗನನ್ನು ಕೊಟ್ಟನು (ಯೋಹಾನ 3:16). ಯೇಸು "ತಂದೆಯು . . . ಕೊಟ್ಟ ಆಜ್ಞೆಯ ಮೇರೆಗೆ" ಸರಿಯಾಗಿ ಮಾಡುವ ಮೂಲಕ ತಂದೆಯ ಮೇಲಿನ ತನ್ನ ಪ್ರೀತಿಯನ್ನು ತೋರ್ಪಡಿಸಿದನು (ಯೋಹಾನ 14:31).

"ತನ್ನ ರಾಜ್ಯದೊಳಗೆ" ಎಂಬ ಪದಗುಚ್ಛದಲ್ಲಿ, "ದೊಳಗೆ" ಎಂಬುದು εἰς (*eis*) ಗ್ರೀಕ್ ಪದವಾಗಿದ್ದು, "ಒಳಗೆ" ಎಂಬರ್ಥವಾಗಿದೆ. ಕೊಲೊಸ್ಸೆಯವರು ಅಂಧಕಾರದ ದೊರೆತನ "ದಿಂದ" (ἐξ, *ex,* "ದಿಂದ ಹೊರಗೆ" ಎಂಬರ್ಥ) ಬಿಡಿಸಲ್ಪಟ್ಟು ಯೇಸುವಿನ ರಾಜ್ಯ "ದೊಳಗೆ" ಸೇರಿಸಲ್ಪಟ್ಟಿದ್ದರು, ಹೀಗೆ ಆತನ ಪರಲೋಕ ರಾಜ್ಯದ ನಾಗರಿಕರಾದರು (ಫಿಲಿಪ್ಪಿ 3:20). ಈ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ಆತನ ರಾಜ್ಯವು ಪ್ರಸ್ತುತ ಕಾಲದ ವಾಸ್ತವಿಕತೆಯಾಗಿತ್ತು. ಯೇಸುವಿನ ರಾಜ್ಯವು ಮುಂದೊಂದು ದಿನ ಸ್ಥಾಪಿಸಲ್ಪಡುವದೆಂದು ನಿರೀಕ್ಷಿಸುವವರು ಆತನ ರಾಜ್ಯದ ಸ್ವಭಾವ ಮತ್ತು ದೇವರ ವೇಳಾಪಟ್ಟಿಯನ್ನು ಅಪಾರ್ಥ ಮಾಡಿಕೊಂಡವರಾಗಿರುತ್ತಾರೆ. ಕೊಲೊಸ್ಸೆಯವರು – ನೀರಿನಿಂದಲೂ ಆತ್ಮನಿಂದಲೂ ಹುಟ್ಟಿರುವ ಮಿಕ್ಕ ಎಲ್ಲರಂತೆಯೇ (ಯೋಹಾನ 3:5) – ಸೈತಾನನ ದೊರೆತನದಿಂದ

ಬಿಡಿಸಲ್ಪಟ್ಟು ಯೇಸು ಕ್ರಿಸ್ತನ ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದರು. ಅವರು ಅಸ್ತಿತ್ವದಲ್ಲಿದ್ದ ರಾಜ್ಯವೊಂದರ ಭಾಗವಾಗಿದ್ದರು.

ಕ್ರಿಸ್ತನ ರಾಜ್ಯವು "ಕ್ರಿಸ್ತನ ಮತ್ತು ದೇವರ ರಾಜ್ಯ" ಎಂದು ಸಹ ಕರೆಯಲ್ಪಟ್ಟಿದೆ (ಎಫೆಸ 5:5). ಇದು ಸತ್ಯವಾದದ್ದು ಯಾಕೆಂದರೆ ಕ್ರಿಸ್ತನ ರಾಜ್ಯವು "ಪರಲೋಕ ರಾಜ್ಯ" ಆಗಿರುತ್ತದೆ (ಮತ್ತಾಯ 3:2), ಅಥವಾ "ದೇವರರಾಜ್ಯ" ಆಗಿರುತ್ತದೆ (ಮಾರ್ಕ 4:11). "ಸಮೀಪವಾಯಿತು" ಎಂದು ಬೋಧಿಸಲ್ಪಟ್ಟ ರಾಜ್ಯವು (ಮತ್ತಾಯ 3:2; 4:17), ಈಗಾಗಲೇ ನಿಮ್ಮ "ಸಮೀಪಕ್ಕೆ ಬಂದದೆ" ಎಂದು ಹೇಳಲ್ಪಟ್ಟ ರಾಜ್ಯವು ಇದೇ ಆಗಿತ್ತು (ಲೂಕ 10:9). ಯೇಸು ಹೀಗೆ ಹೇಳಿದನು, "ನನ್ನ ರಾಜ್ಯವು ಈ ಲೋಕದ್ದಲ್ಲ; . . . ನನ್ನ ರಾಜ್ಯವು ಇಲ್ಲಿಯದಲ್ಲ" (ಯೋಹಾನ 18:36). ಈ ಹೇಳಿಕೆಯ ಮೂಲಕ, ತನ್ನ ರಾಜ್ಯವು ಭೂಸಂಬಂಧವಾದದ್ದು, ಶಾರೀರಿಕ ದೊರೆತನವುಳ್ಳದ್ದು ಆಗಿರುವದಿಲ್ಲ ಎಂಬರ್ಥದಲ್ಲಿ ಯೇಸು ಹೇಳಿದನು. Robert G. Bratcher and Eugene A. Nida ಹೀಗೆ ಬರೆದರು, "ಆತನ ಪ್ರಿಯ ಕುಮಾರನ ರಾಜ್ಯವನ್ನು ಒಂದು ಭೌಗೋಳಿಕ ಸ್ಥಳವೆಂದು ಅರ್ಥಮಾಡಿಕೊಳ್ಳಕೂಡದು, ಆದರೆ ಬದಲಾಗಿ 'ಆಳ್ವಿಕೆ' ಅಥವಾ 'ಅಧಿಕಾರದ ವ್ಯಾಪ್ತಿ' ಎಂದು ಅರ್ಥಮಾಡಿಕೊಳ್ಳತಕ್ಕದ್ದು."[12]

## ಕ್ರಿಸ್ತನಲ್ಲಿ ಅವರ ಮತ್ತು ನಮ್ಮ ಕ್ಷಮಾಪಣೆ (1:14)

**14ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

### "ಆ ಕುಮಾರನಲ್ಲಿ . . . ನಮಗೆ ಬಿಡುಗಡೆಯಾಯಿತು"

ಪೌಲನು 13ನೇ ವಚನದಲ್ಲಿ ಆರಂಭವಾದ ಬಿಡುಗಡೆಯ ಸಾದೃಶ್ಯವನ್ನು ಮುಂದುವರೆಸುತ್ತಾನೆ. ಕೊಲೊಸ್ಸೆಯವರು, ಪೌಲನ ಜೊತೆಯಲ್ಲಿ, ಆತ್ಮೀಕ ಬಂಧನದಿಂದ ಬಿಡುಗಡೆಗೊಳಿಸಲ್ಪಟ್ಟಿದ್ದರು ಮತ್ತು ಮುಕ್ತಗೊಳಿಸಲ್ಪಟ್ಟಿದ್ದರು. ಬಿಡುಗಡೆಯ ಫಲಿತವು **ಬಿಡುಗಡೆಯ** ಏಕೈಕ ಮುಲನಾದ ಕ್ರಿಸ್ತ ಯೇಸುವಿನಲ್ಲಿರುವವರು ಅನುಭವಿಸುವ ಪಾಪಗಳ ಪರಿಹಾರವೇ ಆಗಿತ್ತು.

Moule ವ್ಯಕ್ತಪಡಿಸಿದ ಈ ಕೆಳಗಿನ ಅಭಿಪ್ರಾಯವನ್ನು ಸರಿಯಾಗಿರುತ್ತದೆ:

> 13ನೇ ವಚನವನ್ನು ಬಿಟ್ಟು ಹೋಗುವ ಮುನ್ನ, "ಕುಮಾರನ*ಲ್ಲಿ*" ಎಂಬದನ್ನು ಗಮನಿಸಿರಿ, "ಕುಮಾರನ ಮುಖಾಂತರ, ಅಥವಾ ನಿಂದ" ಅಲ್ಲ. ಹೀಗೆ ಇಲ್ಲಿರುವ ಆಲೋಚನೆ ಎಂದರೆ ಕ್ರಿಸ್ತನೊಂದಿಗಿನ ಐಕ್ಯತೆ . . . ವಿಮೋಚಕನ ಮರಣದ ಕಾರ್ಯ ಮೂಲಕ ಗಳಿಸಲ್ಪಟ್ಟ, ಪಾಪಪರಿಹಾರವು, ವಿಮೋಚನಕ ನಿಗೂಢ ವ್ಯಕ್ತಿಯೊಳಗೆ ನಂಬಿಕೆಯ ಮೂಲಕ ಸೇರ್ಪಡೆಗೊಳ್ಳುವರಿಗಾಗಿ ಇರುತ್ತದೆ.[13]

ಎಲ್ಲಾ ಕ್ರೈಸ್ತರ ಹಾಗೆಯೇ, ಕೊಲೊಸ್ಸೆಯವರು ದೀಕ್ಷಾಸ್ನಾನದ ವೇಳೆ ಕ್ರಿಸ್ತನೊಳಗೆ ಪ್ರವೇಶಿಸಿದ್ದರು. ಯೇಸುವಿನಲ್ಲಿರುವದು ಪ್ರಾಮುಖ್ಯವಾದದ್ದು ಯಾಕೆಂದರೆ ಎಲ್ಲಾ ಆತ್ಮೀಕ ಆಶೀರ್ವಾದಗಳು ಆತನಲ್ಲಿಯೇ ಇರುತ್ತವೆ (ಎಫೆಸ 1:3). "ಬಿಡುಗಡೆ" (ἀπολύτρωσις, *apolutrōsis*) ಎಂದರೆ ಬಿಡುಗಡೆಯ ಹಣವನ್ನು ಕೊಟ್ಟು ಬಂಧನದಲ್ಲಿರುವ ಒಬ್ಬ ದಾಸನನ್ನು ಅಥವಾ ಸೆರೆಯಾಳನ್ನು ಬಿಡಿಸುವದು ಎಂದರ್ಥವಾಗಿರುವದಿಲ್ಲ. ಬದಲಾಗಿ,

ದಾಸತ್ವಕ್ಕೊಳಗಾಗಿರುವವನಿಗೆ ಬಿಡುಗಡೆ ಒದಗಿಸುವದರ ಫಲಿತದ ಮೇಲೆ ಅದು ಒತ್ತು ಕೊಡುತ್ತದೆ. Bratcher and Nida ಹೀಗೆ ಬರೆಯುತ್ತಾರೆ, "ಇಲ್ಲಿರುವ *apolutrōsis* ಗ್ರೀಕ್ ಪದದಲ್ಲಿ ಕೆಲವು ಸಾರಿ ಅಭಿಪ್ರಾಯ ಪಡುವ ಪ್ರಕಾರ, ಸೆರೆಯಲ್ಲಿರುವವನ್ನು ಬಿಡಿಸುವದಕ್ಕೆ ಈಡು ಕೊಡಲ್ಪಡುವ ಆಲೋಚನೆಯು ಇರುವದಿಲ್ಲ; ಇದು ಬಿಡುಗಡೆಯ ಕ್ರಿಯೆಯಿಂದಾದ ಫಲಿತದ ಒತ್ತು ಕೊಡುತ್ತದೆ."[14]

ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ಮತ್ತು ತನ್ನ ರಕ್ತವನ್ನು ಸುರಿಸುವ ಮೂಲಕ (1 ಪೇತ್ರ 1:18, 19), ಯೇಸು ಪಾಪದಿಂದ ಬಿಡುಗಡೆ ಒದಗಿಸಿದನು (ರೋಮಾ 6:23). ಆತನು ಕೊಲೊಸ್ಸೆಯವರನ್ನು ದಾಸತ್ವದೊಳಗಿಂದ (ಯೋಹಾನ 8:34; ರೋಮಾ 6:16), ಪಾಪದ ಅಪರಾಧಭಾವನೆಯಿಂದ ಮತ್ತು ದಂಡನೆಯಿಂದ (ಯೋಹಾನ 8:36; ಗಲಾತ್ಯ 5:1) ಬಿಡಿಸಿದ್ದನು. ಆತನು ರಕ್ತವನ್ನು ಸುರಿಸಿದ್ದರಿಂದ ಇದು ಸಾಧ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 20:28). F. F. Bruce ಹೀಗೆ ಬರೆಯುತ್ತಾನೆ, "ಬಿಡುಗಡೆಯು ಕ್ರಿಸ್ತನಿಂದ ತನ್ನ ಜನರಿಗೋಸ್ಕರ ಒಂದೇ ಸಾರಿಗೆ ಸಂಪಾದಿಸಿಕೊಳ್ಳಲ್ಪಟ್ಟಿತು, ಆದರೆ ಅವರು ನಂಬಿಕೆಯ ಮೂಲಕ ಆತನೊಂದಿಗೆ ಐಕ್ಯಗೊಂಡ ಹಾಗೆ ವೈಯಕ್ತಿಕವಾಗಿ ಸ್ವೀಕರಿಸಿಕೊಳ್ಳಲ್ಪಡುತ್ತದೆ."[15]

ಕೆಲವು ತರ್ಜುಮೆಗಳು "ಆತನ ರಕ್ತದ ಮೂಲಕ" ಎಂದು ಸೇರ್ಪಡೆಗೊಳಿಸುತ್ತವೆ (KJV; NKJV). ಈ ಆಲೋಚನೆಯು ನಿಖರವಾದದ್ದಾದರೂ, ಈ ಪದಗುಚ್ಛವು ಹಳೆಯ ಹಸ್ತಪ್ರತಿಗಳಲ್ಲಿ ಕಂಡು ಬರುವದಿಲ್ಲ.

## "ಪಾಪಗಳು ಪರಿಹಾರವಾಗಿ"

ಪೌಲನು 14ನೇ ವಚನದಲ್ಲಿ ಉಲ್ಲೇಖಿಸಿದ ಅಂತಿಮ ಆಶೀರ್ವಾದವು ಬಿಡುಗಡೆಯಾಗಿದೆ. **ಪರಿಹಾರ**ವು "ಬಿಡುಗಡೆ"ಯ ಪಕ್ಕದಲ್ಲಿಯೇ ಇರುವದಾಗಿದೆ, ಆ ಪದವನ್ನು ಪುನರಾವರ್ತಿಸುತ್ತದೆ ಮತ್ತು ಪದದ ಆಲೋಚನೆಯನ್ನು ವಿವರಿಸುತ್ತದೆ. ಬಿಡುಗಡೆ ಮತ್ತು ಪರಿಹಾರ ಎಂದರೆ ಪಪದಿಂದ ಸ್ವಾತಂತ್ರ್ಯ, ವಿಮೋಚನೆ, ಮತ್ತು ವಿಮುಕ್ತಿ ಎಂಬರ್ಥವಾಗಿದೆ. ಕ್ರಿಸ್ತನಲ್ಲಿರುವವರಿಗೆ, ಒದಗಿಸಲ್ಪಡುವ ಈ ಶ್ರೇಷ್ಠ ಆಶೀರ್ವಾದಗಳು ಆತನ ವಿಮೋಚನೆಯ ಕಾರ್ಯದಿಂದಾಗಿ ಸಾಧ್ಯಗೊಂಡಿರುತ್ತವೆ. ರಕ್ತಧಾರೆಯಿಲ್ಲದೆ ಪಾಪ ಪರಿಹಾರವಿರುವದಿಲ್ಲ (ಇಬ್ರಿಯ 9:22). ಯೇಸುವಿನ ರಕ್ತದಿಂದ (1 ಯೋಹಾನ 1:7; ಪ್ರಕಟನೆ 1:5) ಪಾಪಗಳು ಕ್ಷಮಿಸಲ್ಪಡುತ್ತವೆ ಮತ್ತು ತೊಳೆಯಲ್ಪಡುತ್ತವೆ (ಮತ್ತಾಯ 26:28). "ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯದ" ಕಾರಣದಿಂದ ಕ್ಷಮಾಪಣೆಯು ಒದಗಿಸಲ್ಪಟ್ಟಿರುತ್ತದೆ (ಎಫೆಸ 2:7). ಕ್ಷಮಾಪಣೆಯನ್ನು ಒದಗಿಸುವಂಥ ಕೃಪೆಯು ಮಾನವ ಪ್ರಯಾಸದಿಂದ ಸಂಪಾದಿಸಿಕೊಳ್ಳಲ್ಪಡುವದಿಲ್ಲ (ಎಫೆಸ 2:8, 9). ಅದನ್ನು ಪಡೆದುಕೊಳ್ಳಲು ಇಚ್ಛಿಸುವವರು ಯೇಸುವಿನಲ್ಲಿ ಇರತಕ್ಕದ್ದು (ಎಫೆಸ 4:32). ದೀಕ್ಷಾಸ್ನಾನದ ಸಂದರ್ಭದಲ್ಲಿಯೇ ಒಬ್ಬನು ಕ್ರಿಸ್ತನೊಳಗೆ ಪ್ರವೇಶಿಸುತ್ತಾನೆ (ರೋಮಾ 6:3; ಗಲಾತ್ಯ 3:26, 27) ಮತ್ತು ಒಬ್ಬನು ಕ್ರಿಸ್ತನಲ್ಲಿರುವ ಕೃಪೆ ಮತ್ತು ಕ್ಷಮಾಪಣೆಗಳನ್ನು ಸ್ವೀಕರಿಸಿಕೊಳ್ಳುವಾಗ ಕ್ರಿಸ್ತನನ್ನು ಪ್ರವೇಶಿಸುತ್ತಾನೆ (2 ತಿಮೊಥೆ 2:1).

ಇದು ವಿಚಿತ್ರವಾಗಿ ತೋರಬಹುದಾದರೂ, "ಪರಿಹಾರ" (ἄφεσις, *aphesis*)

ಎಂಬುದು ಪೌಲನ ಪತ್ರಿಕೆಗಳೊಳಗೆ ಇಲ್ಲಿ ಮಾತ್ರವೇ ಮತ್ತು ಒಂದು ರೀತಿ ಸಮಾನತೆಯುಳ್ಳ ವಾಕ್ಯಭಾಗವಾದ ಎಫೆಸ 1:7ರಲ್ಲಷ್ಟೇ ಕಾಣಿಸಿಕೊಳ್ಳುತ್ತದೆ. ಪೌಲನ ಈ ಪದವನ್ನು ಅಂತಿಯೋಕ್ಯದ ಪಿಸಿದ್ಯದಲ್ಲಿನ ತನ್ನ ಭಾಷಣದಲ್ಲಿ ಬಳಸಿದ್ದನೆಂದು ಲೂಕನು ಬರೆದಿರುತ್ತಾನೆ (ಅಪೊಸ್ತಲರ ಕೃತ್ಯಗಳು 13:38).

ಯೇಸುವಿನ ರಕ್ತವು ಪಾಪಗಳ ಪರಿಹಾರಕ್ಕಾಗಿ ಸುರಿಸಲ್ಪಟ್ಟಿತು ಎಂಬ ತನ್ನ ಹೇಳಿಕೆಯಲ್ಲಿ ಮತ್ತಾಯನು "ಪರಿಹಾರ" ಎಂಬುದನ್ನು ಒಂದು ಸಾರಿ ಬಳಸಿದನು (ಮತ್ತಾಯ 26:28). ಯೋಹಾನನು ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಯೋಹಾನನು ಸಾರಿದನೆಂದು ಮಾರ್ಕನು ದಾಖಲಿಸುತ್ತಾನೆ (ಮಾರ್ಕ 1:4; ಅಲ್ಲದೆ ಲೂಕ 3:3 ಸಹ ನೋಡಿರಿ). ಪವಿತ್ರಾತ್ಮನಿಗೆ ವಿರುದ್ಧವಾಗಿ ಮಾತಾಡುವದಕ್ಕೆ ಎಂದಿಗೂ ಕ್ಷಮಾಪಣೆ ಸಿಕ್ಕುವದಿಲ್ಲ ಎಂದು ಯೇಸು ಕಲಿಸಿದನು (ಮಾರ್ಕ 3:29). ಲೂಕನ ಪ್ರಕಾರವಾಗಿ, ಯೇಸು ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಕೊಡುವನೆಂದು ಜಕರೀಯನು ಪ್ರವಾದಿಸಿದನು (ಲೂಕ 1:67, 77). ಯೇಸು ತಾನು ಸೆರೆಯಲ್ಲಿರುವವರನ್ನು "ಬಿಡುಗಡೆ" ಮಾಡಿ "ಬಿಡಿಸಿ" ಕಳುಹಿಸುವನೆಂಬ ಹಳೆಯ ಒಡಂಬಡಿಕೆಯ ವಾಕ್ಯಭಾಗವನ್ನು ಓದಿ ಅದನ್ನು ತನಗೆ ಅನ್ವಯಿಸಿಕೊಂಡನು (ಲೂಕ 4:18). ಪಾಪಗಳ ಕ್ಷಮಾಪಣೆಯ ವಾರ್ತೆಯು ಮೊದಲು ಯೆರೂಸಲೇಮಿನಲ್ಲಿ ಸಾರಲ್ಪಡುವದೆಂದು ಆತನು ಹೇಳಿದನು (ಲೂಕ 24:47). "ಪರಿಹಾರ" ಎಂಬ ಪದವು ಯೋಹಾನನ ಸುವಾರ್ತೆಯಲ್ಲಿ ಕಂಡು ಬರುವದಿಲ್ಲ. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಸಾರಲಾದ ಪ್ರತಿಯೊಂದು ಪ್ರಸಂಗದಲ್ಲಿ ಪರಿಹಾರ ಎಂಬದನ್ನು ಒಳಗೊಂಡಿತ್ತು (ಅಪೊಸ್ತಲರ ಕೃತ್ಯಗಳು 2:38; 5:31; 10:43; 13:38; 24:47). ಪಾಪಗಳು ಕ್ಷಮಿಸಲ್ಪಡುವದಕ್ಕಾಗಿ ರಕ್ತದ ಸುರಿಸಲ್ಪಡುವಿಕೆಯು ಅವಶ್ಯಕ ಎಂಬುದನ್ನು ಒತ್ತಿ ಹೇಳುತ್ತದೆ (ಇಬ್ರಿಯ 9:22; 10:18).

1:12-14ರಲ್ಲಿ ಆರು ಸತ್ಯಗಳು ಸೂಚ್ಯಾರ್ಥವಾಗಿ ಕಂಡು ಬರುತ್ತವೆ:

1. ನಾಶನದಲ್ಲಿರುವವರು ಅಂಧಕಾರದಲ್ಲಿ, ಸೈತಾನನ ಅಧಿಕಾರದಡಿಯಲ್ಲಿ ಇದ್ದಾರೆ.
2. ಅವರನ್ನು ಅಂಧಕಾರದಿಂದ ಬಿಡಿಸಿ ಬೆಳಕಿನೊಳಗೆ ಸೇರಿಸಲು ಸಾಧ್ಯವಿರುತ್ತದೆ.
3. ಅವರ ಪಾಪಗಳು ಪರಿಹರಿಸಲ್ಪಟ್ಟಾಗ, ಅವರು ಅಂಧಕಾರದಿಂದ ಮತ್ತು ಸೈತಾನನ ದೊರೆತನದಿಂದ ಬಿಡಿಸಲ್ಪಡುತ್ತಾರೆ.
4. ಅವರು ನಂಬಿಕೆಯಿಟ್ಟು, ಪಶ್ಚಾತ್ತಾಪಪಟ್ಟು, ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಪಾಪಗಳ ಪರಿಹಾರವು ಪಡೆದುಕೊಳ್ಳಲ್ಪಡುತ್ತದೆ.
5. ಅವರು ಇದನ್ನು ಮಾಡುವಾಗ, ಅವರು ಕ್ರೈಸ್ತರಾಗುವರು ಮತ್ತು ದೇವರು ಅವರನ್ನು ತನ್ನ ಪ್ರಿಯ ಕುಮಾರ ರಾಜ್ಯದೊಳಗೆ ಸೇರಿಸುವನು.
6. ಈ ಸೇರಿಸುವಿಕೆಯು ಅವರನ್ನು ಅಂಧಕಾರದ ಅಧಿಕಾರದಿಂದ ಬಿಡಿಸಿ ಬೆಳಕಿನೊಳಗೆ ತರುವದಾಗಿದೆ.

ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಸಂದರ್ಭದಲ್ಲಿಯೇ,

ಅವರು ಅಂಧಕಾರದಿಂದ, ದೇವರ ಪ್ರಜೆಯಾಗಿಲ್ಲದಿರುವಿಕೆಯಿಂದ, ಮತ್ತು ಕರುಣೆಯಿಲ್ಲದವರಾಗಿರುವಿಕೆಯಿಂದ ಬಿಡಿಸಲ್ಪಡುವರು. ಅವರು ಬೆಳಕಿನಲ್ಲಿರುವದಕ್ಕೆ, ದೇವರ ಪ್ರಜೆಗಳಾಗಿರುವದಕ್ಕೆ, ಮತ್ತು ಕರುಣೆಯನ್ನು ಪಡೆಯುವವರಾಗಿರುವದಕ್ಕೆ ನಡಿಸಲ್ಪಡುವರು.

## ಹೆಚ್ಚಿನ ಅಧ್ಯಯನಕ್ಕಾಗಿ:
## ಕ್ರಿಸ್ತನ ರಾಜ್ಯ (1:13)

ರಾಜ್ಯದ ವಿಷಯದಲ್ಲಿ ನೋಡುವದಾದರೆ, ಕ್ರಿಸ್ತನು ದಾವೀದನಂತೆಯೇ, ದೇವರ ಪ್ರಜೆಗಳ ಮೇಲೆ ಆಳ್ವಿಕೆ ಮಾಡುವನು ಎಂಬದಾಗಿ ಯೆಶಾಯನು ಪ್ರವಾದಿಸಿದನು (ಯೆಶಾಯ 9:6, 7). ದೇವದೂತನಾದ ಗಬ್ರಿಯೇಲನು ಮರಿಯಳಿಗೆ ಕಾಣಿಸಿಕೊಂಡು, ಈ ವಾಕ್ಯಭಾಗವನ್ನ ಪರೋಕ್ಷವಾಗಿ ಸೂಚಿಸುತ್ತಾ, "ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು" ಎಂದು ಹೇಳಿದನು (ಲೂಕ 1:32). ಮೀಕನು ದಾವೀದನ ನಗರವಾದ ಬೇತ್ಲೆಹೇಮಿನಿಂದ ಆಳತಕ್ಕವನು ಬರುವನೆಂದು ಪ್ರವಾದಿಸಿದನು (ಮೀಕ 5:2; ನೋಡಿರಿ ಲೂಕ 2:4).

ರಾಜ್ಯವು ದಾನಿಯೇಲನಿಂದ ಅರ್ಥ ಹೇಳಲ್ಪಟ್ಟ ನೆಬೂಕದ್ನೆಚ್ಚರನ ಕನಸಿನ ಚರ್ಚೆಯಾಂಶವು ಸಹ ಆಗಿತ್ತು. ಕ್ರಿಸ್ತನ ರಾಜ್ಯವು, ದೇವರ ರಾಜ್ಯವು ರೋಮನ್ ಅರಸರ ಆಳ್ವಿಕೆಯ ಕಾಲದಲ್ಲಿ ಸ್ಥಾಪಿಸಲ್ಪಡುವದೆಂದು ಆ ಕನಸು ತಿಳಿಸಿತ್ತು (ದಾನಿಯೇಲ 2:31-44). ಯೆಹೂದ್ಯ ಜನರು ಈ ವೇಳಾಪಟ್ಟಿಯನ್ನು ಅರ್ಥಮಾಡಿಕೊಂಡಿದ್ದರು ಮತ್ತು ಪರಲೋಕ ರಾಜ್ಯವು ಸಮೀಪವಾಯಿತು ಎಂದು ಸಾರುವವನಾಗಿ ಯೋಹಾನನು ಬಂದಾಗ (ಮತ್ತಾಯ 3:1, 2) ಅವರು "ಎದುರುನೋಡುವವರಾಗಿದ್ದರು" (ಲೂಕ 3:15).

ಯೇಸು "ಕಾಲ ಪರಿಪೂರ್ಣವಾಯಿತು" ಎಂದು ಹೇಳುತ್ತಾ (ಮಾರ್ಕ 1:15) ಅದೇ ಸಂದೇಶವನ್ನು ಸಾರುವವನಾಗಿ ತನ್ನ ಸೇವೆಯನ್ನು ಆರಂಭಿಸಿದ್ದನು (ಮತ್ತಾಯ 4:17). ರಾಜ್ಯದ ಬರುವಿಕೆಗಾಗಿ ಕಾಯುವ ಕಾಲವು ಪೂರ್ಣಗೊಂಡಿತ್ತು, ಮತ್ತು ಅದರ ಸ್ಥಾಪನೆಯು ಶೀಘ್ರದಲ್ಲಿಯೇ ನೆರವೇರಿಕೆ ಬರಲಿತ್ತು. ಯೇಸು ರಾಜ್ಯವು ಸಮೀಪವಾಗಿದೆ ಎಂಬ ಅದೇ ಸಂದೇಶದೊಂದಿಗೆ ತನ್ನ ಅಪೊಸ್ತಲರನ್ನು (ಮತ್ತಾಯ 10:5, 7) ಮತ್ತು ಇತರ ಎಪ್ಪತ್ತು ಮಂದಿಯನ್ನು ಸಾರುವದಕ್ಕಾಗಿ ಕಳುಹಿಸಿದನು (ಲೂಕ 10:9, 11). ಯೇಸು ಮಾತಾಡುವ ವೇಳೆಯಲ್ಲಿ ಹಾಜರಿದ್ದ ಕೆಲವರು ರಾಜ್ಯವು ಪ್ರಬಲವಾಗಿ ಬರುವದನ್ನು ಕಾಣಲಿದ್ದರು (ಮಾರ್ಕ 9:1). ಆ ಪ್ರಬಲತೆಯು ಪಂಚಾಶತ್ತಮ ದಿನದಂದು (ಅಪೊಸ್ತಲರ ಕೃತ್ಯಗಳು 2:1-4) ಪವಿತ್ರಾತ್ಮನ ಸುರಿಸಲ್ಪಡುವಿಕೆಯ ಮೂಲಕ ಬಂದಿತ್ತು (ಅಪೊಸ್ತಲರ ಕೃತ್ಯಗಳು 1:8). ಆ ಸಮಯದಲ್ಲಿ ಯೇಸುವಿನ ರಾಜ್ಯವು ಭೂಮಿಗೆ ವಿಸ್ತರಿಸಲ್ಪಟ್ಟಿತ್ತು ಮತ್ತು ಇನ್ನು ಮೇಲೆ "ಸಮೀಪವಾಯಿತು" ಎಂದು ಸಾರಲ್ಪಡಲಿಲ್ಲ. ಬದಲಾಗಿ, ರಾಜ್ಯವು ಸಾರಲ್ಪಟ್ಟಾಗ, ಜನರು ಅದರೊಳಗೆ ಪ್ರವೇಶಿಸುವದಕ್ಕೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಂಡರು. (ಅಪೊಸ್ತಲರ ಕೃತ್ಯಗಳು 8:12ನ್ನು ಯೋಹಾನ 3:3-5 ರೊಂದಿಗೆ ಹೋಲಿಸಿರಿ.) ಅಂದಿನಿಂದ ಮೊದಲ್ಗೊಂಡು, ಆದಿಯಲ್ಲಿನ ಬೋಧಕರ ಸಂದೇಶವು ರಾಜ್ಯ ಅಸ್ತಿತ್ವದಲ್ಲಿತ್ತೆಂಬುದನ್ನು ತೋರಿಸುತ್ತದೆ (ಅಪೊಸ್ತಲರ ಕೃತ್ಯಗಳು 19:8; 20:25; 28:23, 31).

ಕ್ರಿಸ್ತನು ಆರೋಹನಗೊಂಡು ತಂದೆಯ ಬಲಗಡೆಯಲ್ಲಿ ಕುಳಿತುಕೊಂಡಾಗ ಆತನ ಆಳ್ವಿಕೆಯು ಆರಂಭಗೊಂಡಿತು (ಎಫೆಸ 1:20-23; 1 ಪೇತ್ರ 3:22; ನೊಡಿರಿ ದಾನಿಯೇಲ 7:13, 14). ಈಗ ಪರಲೋಕ ಮತ್ತು ಭೂಲೋಕದ ಎಲ್ಲಾ ಅಧಿಕಾರವು ಆತನ ಕೈಯಲ್ಲಿದೆ (ಮತ್ತಾಯ 28:18), ಯಾಕೆಂದರೆ ತಂದೆಯನ್ನು ಹೊರತು ಪಡಿಸಿ ಸಮಸ್ತವೂ ಆತನ ಪಾದದ ಕೆಳಗಿರುತ್ತದೆ (1 ಕೊರಿಂಥ 15:27).

ಯೇಸು ತನ್ನನ್ನು ಪ್ರತಿನಿಧಿಸುವ ಶ್ರೀಮಂತನಂತೆ, ತನ್ನ ರಾಜ್ಯಾಧಿಕಾರವನ್ನು ಪಡೆಯುವದಕ್ಕೆ ಹೋಗುವನೆಂಬದನ್ನು ಕಲಿಸುವದಕ್ಕೆ ಸಾಮ್ಯವೊಂದನ್ನು ಹೇಳಿದನು (ಲೂಕ 19:12). ಆತನ ಪುನರಾಗಮನವು ರಾಜ್ಯವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಆಗಿರುವದಿಲ್ಲ, ಯಾಕೆಂದರೆ ಆತನು ಹಿಂದಿರುಗಿ ಬರುವ ಮುನ್ನ ಅದನ್ನು ಆಗಲೇ ಸ್ವೀಕರಿಸಿಕೊಂಡಿರುವನು. ಆತನು ತನ್ನ ಪ್ರಜೆಗಳಿಂದ ಅವರು ಹೇಗೆ ಜೀವಿಸಿದರೆಂಬ ಲೆಕ್ಕವನ್ನು ಕೇಳುವನು (ಲೂಕ 19:13-27). ಇದು ತೋರ್ಪಡಿಸುವದೇನೆಂದರೆ ಆತನು "ಯುಗಾಂತ್ಯದಲ್ಲಿ" ಬರುವ ವೇಳೆ ಲೋಕಕ್ಕೆ ನ್ಯಾಯತೀರಿಸುವನು ಎಂಬದೆ (ಮತ್ತಾಯ 13:49; 25:31-46). ಆ ಸಮಯದಲ್ಲಿ ಆತನು ರಾಜ್ಯವನ್ನು ಪುನಃ ತನ್ನ ತಂದೆಯ ಕೈಗೆ ಒಪ್ಪಿಸುವನು (1 ಕೊರಿಂಥ 15:23, 24).

ಕೆಲವರು ರಾಜ್ಯವು ಇನ್ನೂ ಬಂದಿರಲಿಲ್ಲ, ಆದರೆ ಕೊಲೊಸ್ಸೆಯವರು ಮುಂದೆ ಬರಲಿದ್ದದರ ರುಚಿಯನ್ನು ಅನುಭವಿಸಿದ್ದರು ಎಂಬ ಆಲೋಚನೆಗೆ ಉತ್ತೇಜನ ನೀಡುತ್ತಾ ಬಂದಿದ್ದಾರೆ. Bruce ಹೀಗೆ ಬರೆಯುತ್ತಾನೆ,

> ವಿಶ್ವಾಸಿಗಳು ಈಗಾಗಲೆ ದೇವರ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದಾರೆಂದು ಆತನು ಒತ್ತಿ ಹೇಳುವಾಗ, ಪೌಲನು ನಮಗೆ ನಿಜವಾಗಿಯೂ ನೆರವೇರಿದ ಅಂತಿಮಗತಿಶಾಸ್ತ್ರದ ಒಂದು ಉದಾಹರಣೆಯನ್ನು ಕೊಡುತ್ತಾನೆ. ಅವರ ಮುಂದಿನ ಕಾಲದಲ್ಲಿ ತನ್ನ ಪೂರ್ಣತೆಯಲ್ಲಿ ಇರುವಂತದ್ದು ಈಗಾಗಲೇ ಅವರಲ್ಲಿ ನಿಜವಾಗಿತ್ತು . . . ಒಂದು ಕಾನೂನು ಕಟ್ಟುಕಥೆಯಲ್ಲದ ಮತ್ತು ಒಂದು ನಿಜವಾದ ಅನುಭವವಾದ ಎದುರುನೋಡುವಿಕೆಯ ಮೂಲಕ ಅವರು ಇನ್ನೂ ಪ್ರಕಟವಾಗಬೇಕಿದ್ದ ಮಹಿಮೆಯನ್ನು ಇಲ್ಲಿ ಮತ್ತು ಈಗ ಪಡೆದುಕೊಂಡಿದ್ದರು. "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆ"ಯು ಇನ್ನೂ ತನ್ನ ಅಪರಿಮಿತವಾದ ಐಶ್ವರ್ಯದಲ್ಲಿ ತೋರ್ಪಡಿಸಲ್ಪಟ್ಟಿರಲಿಲ್ಲ, ಆದರೆ ಅದನ್ನು ಸಂಧಿಸುವದಕ್ಕೆ ವಿಶ್ವಾಸಿಗಳಿಗೆ ಅವಕಾಶ ಒದಗಿಸುವ ದೇವರ ಕ್ರಿಯೆಯ ಈಗಾಗಲೇ ಸಂಭವಿಸಿತ್ತು . . . ಅದು ಈಗಾಗಲೇ ಕ್ರಿಸ್ತನ ಕಾರ್ಯದ ಮೂಲಕ ಈ ಲೋಕದೊಳಗೆ ಪ್ರವೇಶಿಸಿ ಆಗಿತ್ತು (cf. ಮತ್ತಾಯ 12:28; ಲೂಕ 11:20); ಅದು ಒಂದು ದಿನ ತನ್ನ ಮಹಿಮೆಯ ಪೂರ್ಣತೆಯಲ್ಲಿ ಹೊರಬರುವದಾಗಿದ್ದು ಅದು ಕ್ರಿಸ್ತನ *parousia* [ಎರಡನೆಯ ಬರೋಣ] ವನ್ನು ಅಲಂಕರಿಸುವದು.[16]

ಇದು ಯೇಸುವಿನ ರಾಜ್ಯದ ಸ್ವಭಾವ ಮತ್ತು ಅದರ ಸ್ಥಾಪನೆಯ ಕಾಲದ ಕುರಿತ ಒಂದು ತಪ್ಪು ತಿಳುವಳಿಕೆಯಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ಗ್ರೀಕ್ ಪದವಾದ eis ಎಂಬುದರ ತಪ್ಪು ಬಳಸುವಿಕೆಯಾಗಿರುತ್ತದೆ, ಅದು "ಒಳಗೆ" ಎಂಬ ಅರ್ಥವನ್ನು ಕೊಡುವದಾಗಿದೆ ಮತ್ತು ಇತರ ಕೆಲವು ತರ್ಜುಮೆಗಳಲ್ಲಿ ಹಾಗೆಯೇ ಅನುವಾದಿಸಲ್ಪಟ್ಟಿರುತ್ತದೆ (1:13; KJV; NKJV; NIV; ಮತ್ತು NRSV ಸೇರಿಂದತೆ). ಆತನ ರಾಜ್ಯವು ಒಂದು ಪ್ರಸ್ತುತ ವಾಸ್ತವಿಕತೆಯಾಗಿತ್ತು – ಅದು ಕೊಲೊಸ್ಸೆಯವರು ಅದರೊಳಗೆ ಸೇರಿಸಲ್ಪಟ್ಟಿದ್ದರು ಎಂಬ

ವಾಸ್ತವಾಂಶದಲ್ಲಿ ಗೋಚರವಾಗುತ್ತದೆ. ಯೇಸುವಿಗೆ ನಂಬಿಗಸ್ತರಾಗಿರುವವರು ಆತನು ಹಿಂದಿರುಗಿ ಬರುವ ತನಕ ಆತನ ರಾಜ್ಯದಲ್ಲಿ ಮುಂದುವರೆಯುವರು. ಕ್ರೈಸ್ತರು ಈಗ ಆತನ ರಾಜ್ಯದೊಳಗಡೆ ಯಾಜಕರಾಗಿರುತ್ತಾರೆ (ಪ್ರಕಟನೆ 1:6; 5:10). ಅವರು ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ಯೋಗ್ಯರಾಗಿ ಮಾಡಲ್ಪಟ್ಟಿದ್ದಾರೆ, ಅದು ಅವರು ಇನ್ನೂ ಪ್ರವೇಶಸಬೇಕಾಗಿರುವ ಒಂದು ಬಾಧ್ಯತೆಯಾಗಿರುತ್ತದೆ.

## ಅನ್ವಯಿಸುವಿಕೆ

### ಸಹೋದರರಿಗಾಗಿ ಪೌಲನ ಪ್ರಾರ್ಥನೆ (1:9-11)

ಪೌಲನು ಸಹೋದರರಿಗಾಗಿ ಮಾಡಿದ ವಿಜ್ಞಾಪನೆಗಳಲ್ಲೊಂದೆಂದರೆ ಅವರು ಜ್ಞಾನದಿಂದ ತುಂಬಿಸಲ್ಪಡಬೇಕೆಂಬದೆ (1:9). ನಾವು ದೇವರ ವಾಕ್ಯದಲ್ಲಿ ಮಾತ್ರವೇ ಸಿಕ್ಕುವಂಥ ಆತ್ಮೀಕ ಜ್ಞಾನ ಮತ್ತು ತಿಳುವಳಿಕೆಗಳನ್ನು ಹುಡುಕುತ್ತೇವೆ. ಇಂದಿನ ನಮ್ಮ ಮಾಹಿತಿ ಯುಗದಲ್ಲಿ, ಕಂಪ್ಯೂಟರ್‌ಗಳು ಮತ್ತು ಮಾಧ್ಯಮಗಳು ದೇವರ ಮಕ್ಕಳಿಗೆ ಹಾನಿಕಾರಕವಾಗಬಲ್ಲ ಆಲೋಚನೆಗಳನ್ನು ಹಂಚಿಕೆ ಮಾಡುತ್ತವೆ. ಕ್ರೈಸ್ತರು ಏಕಾಗ್ರತೆಯನ್ನು ಭಂಗಪಡಿಸುವ ಲೋಕದ ಯಾವದೇ ಕಾರ್ಯಗಳಿಗಿಂತಲೂ ದೇವರ ಜ್ಞಾನದಿಂದ, ಆತನ ವಾಕ್ಯದಿಂದ ಮತ್ತು ನೀತಿಯಿಂದ ತುಂಬಿಸಲ್ಪಡಬೇಕೆಂದು ಒಬ್ಬರಿಗೊಬ್ಬರು ಪ್ರಾರ್ಥಿಸತಕ್ಕದ್ದು.

ಪೌಲನಿಂದ ಮಾಡಲ್ಪಟ್ಟ ಮತ್ತೊಂದು ವಿಜ್ಞಾಪನೆ ಎಂದರೆ ತನ್ನ ಜೊತೆಯ ಕ್ರೈಸ್ತರು ಯೋಗ್ಯವಾದ ರೀತಿಯಲ್ಲಿ ನಡೆಯುವವರಾಗಬೇಕೆಂಬದೆ (1:10). ಸುಮ್ಮನೆ ಜ್ಞಾನ ಪಡೆಯಬೇಕೆಂಬದಕ್ಕಾಗಷ್ಟೆ ತಿಳಿದುಕೊಳ್ಳುವದು ದೇವರ ದೃಷ್ಟಿಯಲ್ಲಿ ಸಾಕಾದದ್ದಾಗಿರುವದಿಲ್ಲ. ತಿಳಿದಿದ್ದರೂ ಮಾಡದಿರುವವರು ಪಾಪಕ್ಕೊಳಗಾದವರಾಗಿದ್ದಾರೆ (ಯಾಕೋಬ 4:17). ಜ್ಞಾನವನ್ನು ಅನ್ವಯಿಸಿಕೊಳ್ಳಲಿಲ್ಲವೆಂದರೆ ಅದು ಇದ್ದು ಪ್ರಯೋಜನವೇನು? ಸುರಕ್ಷತೆಯ ಮುನ್ನೆಚ್ಚರಿಕೆಗಳ ಬಗ್ಗೆ ಗೊತ್ತಿದ್ದರೂ ಅವುಗಳನ್ನು ವಾಹನ ಚಾಲಕರು ಪಾಲಿಸದ ಕಾರಣದಿಂದ ಗಾಯಗಳು ಮತ್ತು ಮರಣಗಳು ಸಂಭವಿಸುತ್ತಿವೆ. ಆತ್ಮೀಕ ಜ್ಞಾನವನ್ನು ಹೊಂದಿರುವದರ ಉದ್ದೇಶವು ನಾವು ದೇವರಿಗೆ ಸಂತೋಷವುಂಟು ಮಾಡುವಂಥ ಕಾರ್ಯಗಳನ್ನು ಅಭ್ಯಾಸ ಮಾಡಬೇಕು ಮತ್ತು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡಬೇಕು ಎಂಬುದೆ.

ಸಹೋದರರು ಬಲಗೊಳಿಸಲ್ಪಡಬೇಕೆಂದು ಸಹ ಪೌಲನು ಪ್ರಾರ್ಥಿಸಿದನು (1:11). ಒಬ್ಬ ಚಿಕ್ಕ ಬಾಲಕನು ಭಾರವಾದ ಕುರ್ಚಿಯೊಂದನ್ನು ಬೇರೆ ಕಡೆ ಎತ್ತಿ ಇಡುವದಕ್ಕೆ ಪ್ರಯತ್ನಿಸುತ್ತಿದ್ದನು ಆದರೆ ಏನನ್ನೂ ಸಾಧಿಸುವದಕ್ಕಾಗಲಿಲ್ಲ. ಆತನ ತಂದೆಯು, “ಮಗನೇ, ನಾನು ನಿನಗೆ ಸಹಾಯ ಮಾಡುತ್ತೇನೆ” ಎಂದು ಹೇಳಿದನು. ಅವರು ಒಟ್ಟಿಗೆ ಸೇರಿ ಕುರ್ಚಿಯನ್ನು ಎತ್ತಿ ಇಟ್ಟರು. ಅದೇ ರೀತಿಯಲ್ಲಿಯೇ ನಾವು ದೇವರ ಬಲದ ಮೇಲೆ ಆತುಕೊಳ್ಳುತ್ತೇವೆ. ಒಂದು ಇಲಿಯು ಆನೆಯ ಜೊತೆಯಲ್ಲಿ ತೂಗು ಸೇತುವೆಯೊಂದನ್ನ ದಾಟಿದ ಬಳಿಕ, ಇಲಿಯು ಹೀಗೆ ಹೇಳಿತು, “ನಾವು ನಿಜಕ್ಕೂ ಸೇತುವೆಯನ್ನು ತೂಗಾಡುವಂತೆ ಮಾಡಿ ಬಿಟ್ಟೆವು!” ನಾವು ಕ್ರಿಸ್ತನಿಗೆ ನಮ್ಮ ಮೂಲಕ ಕಾರ್ಯ ಮಾಡುವಂತೆ

ಅನುಮತಿಸುವದಾದರೆ ಆತನಿಗೋಸ್ಕರ ಇನ್ನು ಎಷ್ಟೋ ಮಹಾ ಕಾರ್ಯಗಳನ್ನು ಮಾಡಬಲ್ಲೆವು (ಫಿಲಿಪ್ಪಿ 2:13).

ಪೌಲನ ದೃಷ್ಟಿಯಲ್ಲಿ ತಾನೊಬ್ಬ ದೇವರಿಗಾಗಿ ದೊಡ್ಡ ಕಾರ್ಯಗಳನ್ನು ಮಾಡುವದಕ್ಕೆ ಪ್ರಯತ್ನಿಸುತ್ತಿರುವ ಒಬ್ಬ ದುರ್ಬಲನಾಗಿದ್ದನು (2 ಕೊರಿಂಥ 12:6). ಇದು ಸತ್ಯವಾಗಿತ್ತು ಯಾಕೆಂದರೆ ಆತನು ತನ್ನ ಸ್ವಂತ ಬಲಹೀನತೆಯನ್ನು ಗ್ರಹಿಸಿಕೊಂಡಿದ್ದರಿಂದಲೇ ದೇವರ ಸಹಾಯವನ್ನು ಹುಡುಕುವದಕ್ಕೆ ಮುಂದಾಗಿದ್ದನು. ಆತನು ಹೀಗೆ ಬರೆಯುವದಕ್ಕೆ ಶಕ್ತನಾದನು, "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13). ನಮ್ಮ ಕ್ರೈಸ್ತ ಪ್ರಯಾಸವು ಎಲ್ಲಾ ನಾವೇ ಎಂದಾಗಲಿ ಅಥವಾ ಎಲ್ಲಾ ದೇವರೆಂದಾಗಲಿ ಸಹ ಅಲ್ಲ. ಇದೊಂದು ಸಹಕಾರದ ಪ್ರಯಾಸವಾಗಿರುತ್ತದೆ. "ನಾವೆಲ್ಲರೂ ದೇವರ ಜೊತೆ ಕೆಲಸದವರು" (2 ಕೊರಿಂಥ 3:9).

ಅದರ ಜೊತೆಗೆ, ಸಹೋದರರು ದೃಢವಾಗಿರುವವರಾಗಬೇಕೆಂದು ಪೌಲನು ಪ್ರಾರ್ಥಿಸಿದನು (1:11). ಒಂದು ಸುಡುವ ಬಿಸಿಲಿನ ದಿನದಂದು, ತೋಟವೊಂದರಿಂದ ಕಳೆಗಳನ್ನು ತೆಗೆದರೆ ಹಣವನ್ನು ಪಡೆಯುವಿರಿ ಎಂದು ಇಬ್ಬರು ಬಾಲಕರಿಗೆ ಹೇಳಲಾಯಿತು. ಧಗೆಯುಂಟು ಮಾಡುವ ಬಿಸಿಲಿನಲ್ಲಿ ಸ್ವಲ್ಪ ಹೊತ್ತು ಕೆಲಸ ಮಾಡಿದ ಬಳಿಕ, ಅವರು ಇದನ್ನು ಮಾಡುವ ಬದಲಾಗಿ ಈಜಾಡುವದಕ್ಕೆ ಹೋಗಲಿಚ್ಚಿಸಿದರು. ಅವರು ಕಳೆ ಕಿತ್ತುವದನ್ನು ಬಿಟ್ಟುಬಿಟ್ಟರು ಮತ್ತು ನಂಬಿಗಸ್ತರಾಗಿ ತಮಗೆ ವಹಿಸಿದ ಕೆಲಸವನ್ನು ಪೂರ್ತಿಗೊಳಿಸಲಿಲ್ಲ. ಅವರು ದೃಢತೆವುಳ್ಳವರಾಗಿಲ್ಲದ ಕಾರಣದಿಂದ, ಅವರು ತಮಗೆ ಸಿಗಬೇಕಾಗಿದ್ದ ಪ್ರತಿಫಲವನ್ನು ಪಡೆದುಕೊಳ್ಳಲಿಲ್ಲ. ದೃಢತೆಯಿಂದಿರುವದೆಂದರೆ ನಮ್ಮಿಂದ ಅಪೇಕ್ಷಿಸಲ್ಪಟ್ಟದ್ದನ್ನು ನಂಬಿಗಸ್ತರಾಗಿ ಮಾಡುವದನ್ನು – ಏನೇ ಕಷ್ಟಗಳು ಬಂದಾಗ್ಯೂ – ಮುಂದುವರೆಸುವದು ಎಂಬದೆ. ರಾಜ್ಯದಲ್ಲಿರುವ ಕೆಲವರು ಹೇಗೆ ಶೋಧನೆಗಳು ಮತ್ತು ಕಷ್ಟಗಳ ಕಾರಣದಿಂದ ಬಿದ್ದು ಹೋಗುವರೆಂಬ ಬಗ್ಗೆ ಯೇಸು ಹೇಳಿದನು (ಮಾರ್ಕ 4:17-19).

ದೇವರ ಮಕ್ಕಳಾಗಿ ನಾವು ಪ್ರೋತ್ಸಾಹಿಸಲ್ಪಡುವ ಅಗತ್ಯವಿರುತ್ತದೆ. ನಾವು ಸಹ, ಆತ್ಮಿಕ ಜ್ಞಾನದಿಂದ ಆಶೀರ್ವದಿಸಲ್ಪಟ್ಟು, ಯೋಗ್ಯವಾದ ರೀತಿಯಲ್ಲಿ ನಡೆಯುವಂತಾಗಲಿ, ದೇವರ ಬಲದಿಂದ ಬಲಗೊಂಡವರಾಗಲಿ, ಮತ್ತು ನಮ್ಮ ನಂಬಿಕೆಯಲ್ಲಿ ಹಾಗೂ ಆತನೊಂದಿಗಿನ ಪ್ರಯಾಣದಲ್ಲಿ ದೃಢತೆಯಿಂದಿರುವವರಾಗಲಿ.

## ಆತ್ಮೀಕ ಅಗತ್ಯತೆಗಳಿಗಾಗಿ ಒಂದು ಪ್ರಾರ್ಥನೆ (1:9)

ಕೊಲೊಸ್ಸೆಯವರ ಆತ್ಮೀಕ ಅಗತ್ಯತೆಗಳು ಒದಗಿಸಲ್ಪಡುವಂತೆ ಪೌಲನು ಪ್ರಾರ್ಥಿಸಿದನು. ಈ ಅಗತ್ಯತೆಗಳಲ್ಲಿ ಜ್ಞಾನ, ತಿಳುವಳಿಕೆ, ಮತ್ತು ಗ್ರಹಿಕೆ ಸೇರಿರುತ್ತವೆ. ಅವರು ದೇವರ ಮುಂದೆ ಯೋಗ್ಯವಾದ ರೀತಿಯಲ್ಲಿ ನಡೆಯುವವರು ಮತ್ತು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುವವರಾಗುವಂತೆ ಈ ಮೂರು ಸಂಬಂಧಪಟ್ಟ ಗುಣಗಳನ್ನು ಅವರು ಹೊಂದಿರಬೇಕೆಂದು ಪೌಲನು ಬಯಸಿದ್ದನು. ಈ ವಿಧದಲ್ಲಿ ಅವರು ದೇವಜ್ಞಾನದಲ್ಲಿ ಅಭಿವೃದ್ಧಿಗೊಂಡು ಆತನ ಮಹಿಮಶಕ್ತಿಯಿಂದ ಬಲಗೊಂಡವರಾಗಿ ದೃಢತೆಯುಳ್ಳವರು, ತಾಳ್ಮೆಯುಳ್ಳವರು, ಮತ್ತು ಆನಂದಭರಿತರು ಆಗುವರು.

ಜ್ಞಾನ, ತಿಳುವಳಿಕೆ ಮತ್ತು ಗ್ರಹಿಕೆಗಳು ಬಹಳಷ್ಟು ಹೋಲಿಕೆಗಳನ್ನು ಹೊಂದಿವೆ. ಜ್ಞಾನವಿದ್ದರೆ ತಿಳುವಳಿಕೆ ಮತ್ತು ಗ್ರಹಿಕೆ ನಿಶ್ಚಿತವಾಗಿ ಇರುತ್ತವೆಂದಾಗುವದಿಲ್ಲ, ಆದರೆ

ಜ್ಞಾನವಿಲ್ಲದಿದ್ದರೆ ಯಾವನೂ ಗ್ರಹಿಸಿಕೊಳ್ಳಲಾರನು ಅಥವಾ ಬುದ್ಧಿವಂತಿಕೆಯಿಂದ ನಡೆದುಕೊಳ್ಳಲಾರನು.

1. ದೇವರು ತನ್ನ ಮನಸ್ಸಿನಲ್ಲಿರುವದನ್ನು ವಾಕ್ಯದ ಮೂಲಕ ಪ್ರಕಟಗೊಳಿಸುವ ಮೂಲಕ ದೇವರ ಚಿತ್ತದ ಜ್ಞಾನವು ಬರುತ್ತದೆ.

> ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ (1 ಕೊರಿಂಥ 2:11-13).

2. ಜ್ಞಾನವನ್ನು ಸರಿಯಾಗಿ ಬಳಸುವ ಸಾಮರ್ಥ್ಯವೇ ತಿಳುವಳಿಕೆ. ಕ್ರೈಸ್ತರು ಜ್ಞಾನಕ್ಕಾಗಿ ದೇವರನ್ನು ಪ್ರಾರ್ಥಿಸತಕ್ಕದ್ದು (ಯಾಕೋಬ 1:5, 6). ಸರಿಯಾದ ವಿಜ್ಞಾಪನೆಯನ್ನು ಮಾಡಿದವನಿಗೆ ಸೊಲೊಮೋನನು ಒಂದು ಉತ್ತಮ ಉದಾಹರಣೆಯಾಗಿದ್ದಾನೆ. ತನಗೆ ಇಸ್ರಾಯೇಲ್ಯರನ್ನು ಹೇಗೆ ಆಳಬೇಕೆಂದು ತಿಳಿಯದೆಂದು ಒಪ್ಪಿಕೊಂಡನು, ಆದಕಾರಣ ಆತನು ಜ್ಞಾನ ಮತ್ತು ವಿವೇಕವನ್ನು ಕೊಡಬೇಕೆಂದು ದೇವರನ್ನು ಕೇಳಿಕೊಂಡನು. ಆತನು ಇವುಗಳನ್ನು ಕೇಳಿಕೊಂಡನಾದ್ದರಿಂದ ಮತ್ತು ದೀರ್ಘಾಯುಷ್ಯವನ್ನಾಗಲಿ, ಐಶ್ವರ್ಯಗಳನ್ನಾಗಲಿ, ಅಥವಾ ತನ್ನ ವೈರಿಗಳ ಮೇಲೆ ಜಯವನ್ನಾಗಲಿ ಕೇಳಿಕೊಳ್ಳಲಿಲ್ಲವಾದ್ದರಿಂದ, ದೇವರು ಆತನಿಗೆ ಒಂದು ಜ್ಞಾನದ ಮತ್ತು ವಿವೇಕದ ಹೃದಯವನ್ನು ಅನುಗ್ರಹಿಸಿದನು (1 ಅರಸು 3:12).

ದೇವರು ಯೇಸುವನ್ನು ಈಗಿನ ಯುಗಕ್ಕೆ ಜ್ಞಾನದ ಮೂಲನಾಗಿ ಅನುಗ್ರಹಿಸಿದ್ದಾನೆ (1 ಕೊರಿಂಥ 1:30; ಕೊಲೊಸ್ಸೆ 2:2, 3). ದೇವರನ್ನು ಮಾನವ ಜ್ಞಾನದಿಂದ ತಿಳಿದುಕೊಳ್ಳಲಾಗದು (1 ಕೊರಿಂಥ 1:21). ಪೌಲನು ಬರೆದಂಥ ಸತ್ಯಗಳು ಆತನಿಗೆ ತಂದೆಯು ಕೊಟ್ಟಿದ್ದ ಜ್ಞಾನಕ್ಕನುಗುಣವಾಗಿದ್ದವು (2 ಪೇತ್ರ 3:15).

3. ಗ್ರಹಿಕೆಯು ಜ್ಞಾನ ಮತ್ತು ತಿಳುವಳಿಕೆಗಳನ್ನು ಸರಿಯಾಗಿ ಅನ್ವಯಿಸುವಾಗ ಬರುತ್ತದೆ, ದೇವರೊಂದಿಗಿನ ನಮ್ಮ ಸಂಬಂಧದಲ್ಲಿ ಅದು ಪ್ರಾಮುಖ್ಯವಾದದ್ದಾಗಿರುತ್ತದೆ.

ಯೇಸುವು ಇಸ್ರಾಯೇಲ್ಯರ ಕುರಿತಾದ ಯೆಶಾಯನ ಹೇಳಿಕೆಯನ್ನು (ಯೆಶಾಯ 6:9, 10) ತನ್ನ ಕಾಲದ ಸಂತತಿಗೆ ಅನ್ವಯಿಸಿದನು. ಅವರು ತಿಳಿದುಕೊಳ್ಳಬಾರದೆಂದು; ದೇವರ ಬಳಿಗೆ ಹಿಂದಿರುಗಿ ಪಾಪ ಕ್ಷಮಾಪಣೆಯನ್ನು ಹೊಂದಬಾರದೆಂದು ತಮ್ಮ ಕಣ್ಣಗಳನ್ನು ಮತ್ತು ಕಿವಿಗಳನ್ನು ಮುಚ್ಚಿಕೊಂಡಿದ್ದರು (ಮಾರ್ಕ 4:12). ರೋಮಾಪುರದಲ್ಲಿದ್ದ ಯೆಹೂದ್ಯರ ಹೃದಯಗಳು ಕಠಿಣವಾಗಿದ್ದ ಕಾರಣ ಪೌಲನು ಈ ವಾಕ್ಯಭಾಗವನ್ನು ಅವರಿಗೆ ಅನ್ವಯಿಸಿದನು (ಅಪೊಸ್ತಲರ ಕೃತ್ಯಗಳು 28:26, 27). ಯೆಹೂದ್ಯರಲ್ಲಿ ಅನೇಕರು ದೇವರ ನೀತಿಯ ಕುರಿತಾಗಿ ಅಜ್ಞಾನಿಗಳಾಗಿದ್ದ ಕಾರಣದಿಂದ ರಕ್ಷಣೆ ಹೊಂದಲು ವಿಫಲರಾದರು (ರೋಮಾ 10:1-3).

ಅಲ್ಲದೆ ಪೌಲನು ಅನ್ಯಜನರ ವಿಷಯವಾಗಿ ಸಹ ಬರೆದನು. ಅವರ ನಿಷ್ಪ್ರಯೋಜನವಾದ ಬುದ್ಧಿಯ ಕಾರಣದಿಂದ, ಅವರ ಮನಸ್ಸು ಮೊಬ್ಬಾಗಿ ಹೋಗಿತ್ತು, ಅದರ ಫಲಿತವಾಗಿ ಅವರು ಕ್ರಿಸ್ತನಿಂದ ಹೊರಗಿಡಲ್ಪಟ್ಟಿದ್ದರು. ಇದು ಅವರಲ್ಲಿದ್ದ ಅಜ್ಞಾನ ಮತ್ತು ಅವರ ಹೃದಯಗಳ ಕಾಠಿಣ್ಯತೆಯ ಕಾರಣದಿಂದ ಸಂಭವಿಸಿತು (ಎಫೆಸ 4:17, 18).

ಕೆಲವು ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯದ ಅಗತ್ಯವಿರುತ್ತದೆ. ಯೇಸು ತನ್ನ ಪುನರುತ್ಥಾನದ ಬಳಿಕ, ಅಪೊಸ್ತಲರಿಗೆ ತನ್ನ ವಿಷಯವಾದ ಪ್ರವಾದನೆಗಳು ಅರ್ಥವಾಗುವಂತಾಗಲು ಅವರಿಗೆ ಶಾಸ್ತ್ರಗಳನ್ನು ವಿವರಿಸಿದನು (ಲೂಕ 24:45). ಐತಿಯೋಪ್ಯದ ಅಧಿಕಾರಿಯು ಯೇಸುವಿನ ವಿಷಯವಾಗಿ ಯೆಶಾಯನು ನುಡಿದಿದ್ದ ಪ್ರವಾದನೆಯನ್ನು (ಯೆಶಾಯ 53) ಅರ್ಥಮಾಡಿಕೊಳ್ಳಲು ಮಾರ್ಗದರ್ಶನ ಬಯಸಿದನು (ಅಪೊಸ್ತಲರ ಕೃತ್ಯಗಳು 8:30-33).

ನಾವು ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳುವಂಥ ವಿವೇಚನೆಯುಳ್ಳ ಜನರಾಗಿರತಕ್ಕದ್ದು (ಎಫೆಸ 5:17). ನಮಗೆ ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವಂತೆ ಇಂದು ಪ್ರೇರಿತ ವ್ಯಕ್ತಿಗಳು ನಮ್ಮ ಮಧ್ಯದಲ್ಲಿ ಇರುವದಿಲ್ಲ. ನಾವು ದೇವರ ಪ್ರಕಟನೆಯನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುವಂತೆ ಹೊಸ ಒಡಂಬಡಿಕೆಯ ಪುಟಗಳು ಬರೆಯಲ್ಪಟ್ಟಿವೆ (2 ಕೊರಿಂಥ 1:13; ಎಫೆಸ 3:3–5).

ಶಾಸ್ತ್ರಗಳ ಕೆಲವು ವಾಕ್ಯಭಾಗಗಳನ್ನು ಇತರ ವಾಕ್ಯಭಾಗಗಳಂತೆ ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲು ಆಗುವದಿಲ್ಲ. ಪೌಲನ ಬರಹಗಳಲ್ಲಿ ಕೆಲವೊಂದನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆಂದು ಪೇತ್ರನು ಬರೆದನು (2 ಪೇತ್ರ 3:16). ಶಾಸ್ತ್ರಗಳನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿ ಜಾಗರೂಕರಾಗಿಲ್ಲದವರು ಯೇಸುವಿನಿಂದ ಗದರಿಸಲ್ಪಟ್ಟ ಯೆಹೂದ್ಯರ ರೀತಿಯಲ್ಲಿರಬಲ್ಲವರಾಗಿದ್ದಾರೆ. ಅವರು ಶಾಸ್ತ್ರಗಳನ್ನಾಗಲಿ ಅಥವಾ ದೇವರ ಶಕ್ತಿಯನ್ನಾಗಲಿ ಅರ್ಥಮಾಡಿಕೊಳ್ಳದ ಕಾರಣ ಅಪಾರ್ಥಮಾಡಿಕೊಂಡಿದ್ದಾರೆಂದು ಯೇಸು ಅವರಿಗೆ ಹೇಳಿದನು (ಮತ್ತಾಯ 22:29).

ಕ್ಷಮಾಪಣೆಗಾಗಿ ಅರ್ಥಮಾಡಿಕೊಳ್ಳುವಿಕೆ ಅವಶ್ಯವಾಗಿರುತ್ತದೆ. ಬಿತ್ತುವವನ ಸಾಮ್ಯದಲ್ಲಿ ಯೇಸು ಹೀಗೆ ಹೇಳಿದನು, "ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವ" (ಮತ್ತಾಯ 13:23). ನಾಶವಾಗುವವನು ಯಾರೆಂದರೆ, ತಿಳುಕೊಳ್ಳದೆ ತಾನು ರಕ್ಷಣೆ ಹೊಂದದಂತಾಗುವ ಹಾಗೆ ವಾಕ್ಯವನ್ನು ತನ್ನ ಹೃದಯದಿಂದ ತೆಗೆದುಕೊಳ್ಳುವಂತೆ ಅನುಮತಿಸುವವನೇ (ಮತ್ತಾಯ 13:19).

ದೇವರ ಜನರಿಗೆ ಜ್ಞಾನ, ತಿಳುವಳಿಕೆ, ಮತ್ತು ಗ್ರಹಿಕೆಯ ಅಗತ್ಯತೆಯಿರುತ್ತದೆ. ನಾವು ಇವುಗಳನ್ನು ಸರಿಯಾದ ಸ್ಥಳದಲ್ಲಿ ಹುಡುಕಬೇಕು, ಅದು ಯೇಸುವೇ ಆಗಿದ್ದಾನೆ, ಆತನಲ್ಲಿಯೇ ಎಲ್ಲಾ ಜ್ಞಾನ ಮತ್ತು ತಿಳುವಳಿಕೆಯ ಬೊಕ್ಕಸವು ಅಡಗಿರುತ್ತದೆ.

## ದೇವರಿಗೆ ಯೋಗ್ಯವಾದ ಒಂದು ನಡೆ (1:10)

ಕ್ರೈಸ್ತರು ದೇವರಿಗೆ ಯೋಗ್ಯರಾಗಿ ನಡೆಯುವವರು, ಆತನಿಗಾಗಿ ಫಲ ಕೊಡುವವರು, ಮತ್ತು ಆತನಲ್ಲಿ ಬಲಗೊಂಡವರು ಆಗುವದಕ್ಕಾಗಿ ಅವರು ಜ್ಞಾನ, ತಿಳುವಳಿಕೆ, ಮತ್ತು ಗ್ರಹಿಕೆಗಳನ್ನು ಹೊಂದಿಕೊಳ್ಳುವ ಅಗತ್ಯವಿರುತ್ತದೆ.

1. *ದೇವರ ಮಕ್ಕಳು ಆತನಿಗೆ ಯೋಗ್ಯರಾಗಿ ನಡೆದು ಆತನನ್ನ ಸಂತೋಷಪಡಿಸುವವರಾಗಿರಬೇಕು.* ಕ್ರೈಸ್ತರು ಹೇಗೆ ನಡೆದುಕೊಳ್ಳತಕ್ಕದ್ದೆಂಬ ಬಗ್ಗೆ ಶಾಸ್ತ್ರಗಳು ತೋರಿಸಿ ಕೊಡುತ್ತವೆ:

ಹಗಲಿನಲ್ಲಿ (ಯೋಹಾನ 11:9).
ಒಂದು ಹೊಸ ಜೀವನದಲ್ಲಿ (ರೋಮಾ 6:4).
ನಂಬಿಕೆಯಿಂದ (2 ಕೊರಿಂಥ 5:7).
ಕ್ರೈಸ್ತ ಕರೆಗೆ ಯೋಗ್ಯರಾಗಿ (ಎಫೆಸ 4:1).
ಸತ್ಕಾರ್ಯಗಳಲ್ಲಿ (ಎಫೆಸ 2:10).
ಬೆಳಕಿನಲ್ಲಿ (1 ಯೋಹಾನ 1:7).
ಯೇಸುವು ನಡೆದ ಪ್ರಕಾರ (1 ಯೋಹಾನ 2:6).
ಆತನ ಆಜ್ಞೆಗಳ ಪ್ರಕಾರವಾಗಿ (2 ಯೋಹಾನ 6).

ನಾವು ಹೇಗೆ ನಡೆಯುವವರಾಗಿರಬಾರದು ಎಂಬ ಬಗ್ಗೆ ಸಹ ಶಾಸ್ತ್ರಗಳು ತೋರಿಸಿ ಕೊಡುತ್ತವೆ:

ದುಷ್ಟರ ಆಲೋಚನೆಯಂತೆ (ಕೀರ್ತನೆ 1:1).
ರಾತ್ರಿಯಲ್ಲಿ ಅಥವಾ ಕತ್ತಲೆಯಲ್ಲಿ (ಯೋಹಾನ 11:10; 12:35; 1 ಯೋಹಾನ 1:6).
ಶರೀರಭಾವಕ್ಕೆ ಅನುಸಾರವಾಗಿ (ರೋಮಾ 8:4; 2 ಕೊರಿಂಥ 10:2).
ಇಹಲೋಕಾಚಾರಕ್ಕೆ ಅನುಸಾರವಾಗಿ (ಎಫೆಸ 2:2).
ಅನ್ಯಜನರು ನಡೆದುಕೊಳ್ಳುವ ರೀತಿಯಲ್ಲಿ (ಎಫೆಸ 4:17).
ಅನೈತಿಕ ಕೃತ್ಯಗಳಲ್ಲಿ (ಕೊಲೊಸ್ಸೆ 3:5-10).

ನಾವು ಎಲ್ಲಿ ಮತ್ತು ಹೇಗೆ ನಡೆಯುತ್ತೇವೆಂಬ ಬಗ್ಗೆ ಜಾಗರೂಕರಾಗಿರಬೇಕು. ಪ್ರತಿಯೊಂದು ದಾರಿಯು ಒಂದು ಗಮ್ಯಸ್ಥಾನವನ್ನು ಹೊಂದಿರುತ್ತದೆ. ಇಕ್ಕಟ್ಟಾದ ಮತ್ತು ನಿರ್ಬಂಧಿತವಾದ ದಾರಿಯು ಜೀವಕ್ಕೆ ನಡಿಸುತ್ತದೆ, ಆದರೆ ಅಗಲವಾದ ಮತ್ತು ನಿರ್ಬಂಧವಿಲ್ಲದ ದಾರಿಯು ನಾಶನಕ್ಕೆ ನಡಿಸುತ್ತದೆ (ಮತ್ತಾಯ 7:13, 14).

2. *ಕ್ರೈಸ್ತರು ಫಲವನ್ನು ಕೊಡುವವರಾಗಿರತಕ್ಕದ್ದು.* ಒಂದು ಹಣ್ಣಿನ ಮರವು ಫಲವನ್ನು ಕೊಡದಿದ್ದಲ್ಲಿ ಅದು ಪ್ರಯೋಜನವಿಲ್ಲದ್ದು. ಅಂಜೂರದ ಮರವು ಫಲವನ್ನು ಕೊಡದೆ ಇದ್ದ ಕಾರಣ ಯೇಸು ಅದನ್ನು ಒಣಗಿಹೋಗುವಂತೆ ಶಪಿಸಿದನು (ಮತ್ತಾಯ 21:19).

ತಾನು ದ್ರಾಕ್ಷಾ ಬಳ್ಳಿಯೆಂದು ಮತ್ತು ಆತನ ಹಿಂಬಾಲಕರಾದ, ನಾವು ಕೊಂಬೆಗಳೆಂದು ಯೇಸು ಕಲಿಸಿದನು. ಆತನು ಫಲ ಕೊಡದ ಕೊಂಬೆಗಳನ್ನು ಕಿತ್ತು ಹಾಕುವನು, ಆದರೆ ನಾವು ಆತನಲ್ಲಿ ನೆಲೆಗೊಂಡಿದ್ದರೆ, ಬಹಳಷ್ಟು ಫಲವನ್ನು ಕೊಡುವೆವು ಯಾಕೆಂದರೆ ಆತನನ್ನು ಬಿಟ್ಟು ನಾವು ಏನನ್ನೂ ಮಾಡಲಾಗದು (ಯೋಹಾನ 15:1-6). ನಾವು ಹೆಚ್ಚು ಫಲವನ್ನು ಕೊಡುವದರಿಂದ ತಂದೆಯನ್ನು ಮಹಿಮೆ ಪಡಿಸುತ್ತೇವೆ ಯಾಕೆಂದರೆ ಇದೇ ನಮ್ಮ ಜೀವನದ

ಧ್ಯೇಯ ಆಗಿರುತ್ತದೆ (ಯೋಹಾನ 15:8, 16). ನಾವು ಕ್ರಿಸ್ತನೊಂದಿಗೆ ಒಂದು ವಿವಾಹಕ್ಕೆ ಹೋಲಿಸಲ್ಪಟ್ಟ ಸಂಬಂಧದ ಮೂಲಕ, ಐಕ್ಯಗೊಂಡಿದ್ದರ ಉದ್ದೇಶವು "ದೇವರಿಗೆ ಫಲವಾಗುವದಕ್ಕಾಗಿ"ಯೇ ಆಗಿದೆ (ರೋಮಾ 7:4).

ಕ್ರೈಸ್ತರು ಕೊಡಬಹುದಾದ ಎರಡು ವಿಧವಾದ ಫಲಗಳ ಬಗ್ಗೆ ಹೊಸ ಒಡಂಬಡಿಕೆಯು ತಿಳಿಸುತ್ತದೆ. ಮೊದಲನೆಯದರು, ನಮ್ಮಲ್ಲಿ "ದೇವರಾತ್ಮನಿಂದ ಉಂಟಾಗುವ ಫಲ" ಎಂದು ಪರಿಚಿತವಿರುವಂಥ ಆತ್ಮೀಕ ಸದ್ಗುಣಗಳನ್ನು ಹೊಂದಿರತಕ್ಕದ್ದು (ಗಲಾತ್ಯ 5:22). ನಾವು ಇವುಗಳನ್ನು ನಮ್ಮ ನಂಬಿಕೆಯ ಜೊತೆಗೆ ಸೇರ್ಪಡೆಗೊಳಿಸಿಕೊಳ್ಳುವ ಮೂಲಕ ಅವುಗಳನ್ನು ಬೆಳೆಸಿಕೊಳ್ಳಬೇಕು (2 ಪೇತ್ರ 1:5-7). "ನೀತಿಯೆಂಬ ಫಲವನ್ನು ಕೊಟ್ಟು ಸಮಾಧಾನ ಉಂಟುಮಾಡುವ" ಈ ಸದ್ಗುಣಗಳನ್ನು ಸಾಧಿಸಿಕೊಳ್ಳಲು ಇಷ್ಟಪಡುವವರನ್ನು ದೇವರು ಸಿದ್ಧಗೊಳಿಸುತ್ತಾನೆ (ಇಬ್ರಿಯ 12:11; ನೋಡಿರಿ ಫಿಲಿಪ್ಪಿ 1:11).

ಕ್ರಿಸ್ತನ ಬಳಿಗೆ ಕರೆತರಲ್ಪಡುವಂಥ ನಾಶನದಲ್ಲಿದ್ದ ಜನರು ಎರಡನೆಯ ಫಲವನ್ನು ಪ್ರತಿನಿಧಿಸುತ್ತಾರೆ. ಯೇಸು ತನ್ನ ಹಿಂಬಾಲಕರಿಗೆ ಆತ್ಮಗಳ ಬೆಳೆಯನ್ನು ಕೊಯ್ಯುವವರು "ನಿತ್ಯಜೀವಕ್ಕಾಗಿ ಫಲವನ್ನು" ಕೂಡಿಸಿಟ್ಟುಕೊಳ್ಳು ವವರಾಗಿದ್ದಾರೆ (ಯೋಹಾನ 4:36). ಪೌಲನು ಈ ಮಾತುಗಳನ್ನು ಬರೆಯುವ ಮೂಲಕ ರೋಮಾಪುರಕ್ಕೆ ಹೋಗಬೇಕೆಂಬ ತನ್ನ ಉತ್ಕಷ್ಟವಾದ ಬಯಕೆಯನ್ನು ತಿಳಿಸುತ್ತಾನೆ, "ನನ್ನ ಕೆಲಸವು ಇತರ ಜನಗಳಲ್ಲಿ ಸಫಲವಾದಂತೆ ನಿಮ್ಮಲ್ಲಿಯೂ ಸಫಲವಾದೀತೆಂದು . . . ಹೀಗಿರುವದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವದಕ್ಕೆ ನಾನಂತೂ ಸಿದ್ಧವಾಗಿದ್ದೇನೆ" (ರೋಮಾ 1:13, 15). ಆತನು ಇತರರನ್ನು ಕ್ರಿಸ್ತನ ಬಳಿಗೆ ಕರೆತರುವದನ್ನು "ಕೆಲಸ ಮಾಡಿ ಫಲ ಹೊಂದುವದು" ಎಂಬದಾಗಿ ಪರಿಗಣಿಸಿದ್ದನು (ಫಿಲಿಪ್ಪಿ 1:22).

ನಾವು ಆತನಿಗೋಸ್ಕರ ಫಲವನ್ನು ಕೊಡುವವರಾಗಬೇಕೆಂದು ಯೇಸು ನಮ್ಮನ್ನು ತನ್ನೊಂದಿಗೆ ಐಕ್ಯಗೊಳಿಸಿಕೊಂಡಿದ್ದಾನೆ. ನಾವು ಈ ವಿಷಯದಲ್ಲಿ ಆತನಿಗೆ ನಿರಾಶೆಗೊಳಿಸುವದಾದರೆ, ಆತನು ನಮ್ಮನ್ನು ಯಾವದಕ್ಕೋಸ್ಕರ ರಕ್ಷಿಸಿದನೋ ಆ ಉದ್ದೇಶವನ್ನು ನೆರವೇರಿಸದವರಾಗಿರುತ್ತೇವೆ.

3. *ಕ್ರೈಸ್ತರು ಬಲಗೊಳಿಸಲ್ಪಡತಕ್ಕದ್ದು*. ದೈಹಿಕ ಜೀವಿತವು ಆಹಾರ ಮತ್ತು ವ್ಯಾಯಮಗಳಿಂದ ಬಲಗೊಳಿಸಲ್ಪಡುತ್ತದೆ. ಕ್ರೈಸ್ತ ಜೀವಿತದ ವಿಷಯದಲ್ಲಿ ಸಹ ಅದೇ ರೀತಿಯ ಮೂಲತತ್ವವು ಸತ್ಯವಾಗಿರುತ್ತದೆ. ಕ್ರೈಸ್ತರು ವಾಕ್ಯದಿಂದ ಬೆಳವಣಿಗೆಗೊಳ್ಳುವಂತೆ ಅದನ್ನು ಬಯಸತಕ್ಕದ್ದು (1 ಪೇತ್ರ 2:2). ಆತ್ಮೀಕ ಜೀವನವನ್ನು ಬಲಪಡಿಸುವ ಆಹಾರವೆಂದರೆ ದೇವರ ವಾಕ್ಯವೇ (ಮತ್ತಾಯ 4:4).

ವಿಶೇಷವಾದ ಆತ್ಮೀಕ ಬಲವು ತಂದೆಯ ಮತ್ತು ಯೇಸುವಿನ ಸಹಾಯದಿಂದ ಬರುತ್ತದೆ (2 ಥೆಸಲೋನಿಕ 2:16, 17; 3:3; 1 ಪೇತ್ರ 4:11; 5:10). ಯೇಸುವನ್ನು ಬಿಟ್ಟು ನಾವು "ಏನೂ ಮಾಡಲಾರೆವು" (ಯೋಹಾನ 15:5). ಆತನು ವಾಕ್ಯದ ಮೂಲಕ, ಜೊತೆ ಕ್ರೈಸ್ತರ ಸೇವೆಯ ಮೂಲಕ (ಲೂಕ 22:32; ಅಪೊಸ್ತಲರ ಕೃತ್ಯಗಳು 15:32), ಮತ್ತು ಅಂತರ್ಯವನ್ನು ಬಲಗೊಳಿಸಲು ಸಹಾಯ ಮಾಡುವ ಪವಿತ್ರಾತ್ಮನ ಮೂಲಕ ಸಹಾಯವನ್ನು ಒದಗಿಸಿರುತ್ತಾನೆ (ಎಫೆಸ 3:16). ಕ್ರೈಸ್ತರಲ್ಲಿ ಲೋಕದಲ್ಲಿರುವವನಿಗಿಂತಲೂ ಹೆಚ್ಚಿನ ಬಲವಿರುತ್ತದೆ (1 ಯೋಹಾನ 4:4).

ಯೇಸುವಿಗೆ ಸಹ ಆತನ ಅತ್ಯಂಥ ದೊಡ್ಡ ಸಂಕಷ್ಟದ ಸಮಯದಲ್ಲಿ ಸಹಾಯದ ಅಗತ್ಯವಿತ್ತು. ಆತನು ತನಗೆ ಎದುರಾಗುವ ವೇದನೆ, ತಿರಸ್ಕಾರ, ಮತ್ತು ಶಿಲುಬೆಯ ನೋವುಗಳನ್ನು ಯೋಚಿಸಿದಾಗ, ಆತನು ತಂದೆಯನ್ನು ಈ ಪಾತ್ರೆಯು ನನ್ನಿಂದ ತೊಲಗಿ ಹೋಗುವಂತೆ ಮಾಡು ಎಂದು ಬೇಡಿಕೊಂಡನು. ಆತನ ಮನವಿಯು ತಿರಸ್ಕರಿಸಲ್ಪಟ್ಟಿತಾದರೂ, ಪರಲೋಕದಿಂದ ಒಬ್ಬ ದೇವದೂತನು ಬಂದು ಆತನನ್ನು ಬಲಪಡಿಸಿದನು (ಲೂಕ 22:42, 43). ನಮ್ಮ ಸಂಕಷ್ಟದ ಸಮಯಗಳಲ್ಲಿ ನಮಗೆ ಸಹ ನಮ್ಮ ಅತ್ಯಂಥ ದೊಡ್ಡ ಶೋಧನೆಗಳನ್ನು ಜಯಿಸುವದಕ್ಕೆ ಸಹಾಯದ ಅಗತ್ಯವಿರುತ್ತದೆ. ಪೌಲನು ಸೇವೆಯಲ್ಲಿ ಮತ್ತು ರೋಮಾಪುರದಲ್ಲಿನ ನ್ಯಾಯವಿಚಾರಣೆಯ ವೇಳೆಯಲ್ಲಿ ಕ್ರಿಸ್ತನಿಂದ ತನಗಾದ ಸಹಾಯದ ಬಗ್ಗೆ ಒಪ್ಪಿಕೊಳ್ಳುತ್ತಾನೆ (1 ತಿಮೊಥೆ 1:12; 2 ತಿಮೊಥೆ 1:17). ಯೇಸು ಪೌಲನಿಗೆ ದೇಹಲ್ಲೊಂದು ಶೂಲವನ್ನಿಟ್ಟನು, ಆದರೆ ಪೌಲನನ್ನು ಬಲಗೊಂಡವನ್ನಾಗಿ ಮಾಡುವದಕ್ಕೆ ಅಪೊಸ್ತಲರ ಬಲಹೀನತೆಗಳ ಮೂಲಕ ತನ್ನ ಉದ್ದೇಶಗಳನ್ನು ಸಾಧಿಸುವವನಾಗಿದ್ದನು (2 ಕೊರಿಂಥ 12:9, 10).

ದೇವರ ಮಹಿಮಶಕ್ತಿಯ ಪ್ರಕಾರ ಬಲಹೊಂದುವದರ ಫಲಿತವೆಂದರೆ ಕ್ರೈಸ್ತರು ಬಲಿಷ್ಠರಾಗಿ, ತಾಳ್ಮೆಯುಳ್ಳವರು ಮತ್ತು ಆನಂದವುಳ್ಳವರು ಆಗಿರಬಲ್ಲರು. ಇಂಥ ಗುಣಗಳನ್ನು ಹೊಂದಿರುವವರು ಪರಿಪೂರ್ಣ ಮತ್ತು ಸಂತೃಪ್ತಿಕರ ಜೀವಿತಗಳನ್ನು ನಡಿಸುವರು.

## ದೇವರಿಗೆ ಸಂತೋಷವನ್ನುಂಟು ಮಾಡುವ ಒಂದು ನಡೆ (1:10)

ಕ್ರೈಸ್ತರು ಪಾಪ ಮಾಡುವಾಗ ಮತ್ತು ಅದಕ್ಕಾಗಿ ಪಶ್ಚಾತ್ತಾಪ ಪಡದಿರುವಾಗ, ಅವರು ದೇವರ ಸ್ವಭಾವವನ್ನು ಪ್ರತಿಫಲಿಸುವವರು ಅಥವಾ ಕರ್ತನಿಗೆ ಯೋಗ್ಯರಾಗಿ ನಡೆಯುವವರು ಆಗಿರುವದಿಲ್ಲ. ಒಬ್ಬ ಆತ್ಮೀಕ ನಾಯಕನ ಮಗನು ಅಥವಾ ಮಗಳು, ತಂದೆಯು ಪ್ರೀತಿಯಿಂದ ನೀಡುವ ಮಾರ್ಗದರ್ಶನ ಹೊರತಾಗಿಯೂ ವಿವೇಚನೆಯಿಲ್ಲದೆ ಬಾಳುವದಾದರೆ ಭಕ್ತಿಯುಳ್ಳ ತಂದೆಗೆ ಯೋಗ್ಯರಾಗಿ ನಡೆಯುವವರಾಗಿರುವದಿಲ್ಲ. ದೇವರು ಅವರನ್ನು ಮಕ್ಕಳೆಂದು ಕರೆಯುವದಕ್ಕೆ ಸಂತೋಷ ಪಡುವ ರೀತಿಯಲ್ಲಿ (2 ಕೊರಿಂಥ 6:17, 18; 1 ಯೋಹಾನ 3:1) ಮತ್ತು ಅವರ ದೇವರೆನಿಸಿಕೊಳ್ಳುವದಕ್ಕೆ ನಾಚಿಕೆ ಪಡದ ರೀತಿಯಲ್ಲಿ ಕ್ರೈಸ್ತರು ಜೀವಿಸತಕ್ಕದ್ದು (ಇಬ್ರಿಯ 11:16). ಆ ರೀತಿಯಲ್ಲದೆ ಬೇರೆ ರೀತಿಯಾಗಿ ನಡೆಯುವವರು ದೇವರಿಗೆ ಅವಮಾನ ತರುವವರಾಗಿರುತ್ತಾರೆ (ರೋಮಾ 2:23, 24) ಮತ್ತು ಅಂಥ ಪರಿಶುದ್ಧ ಪರಲೋಕದ ತಂದೆಗೆ ಯೋಗ್ಯರಲ್ಲದವರಾಗಿರುತ್ತಾರೆ.

## ಕರ್ತನಲ್ಲಿ ಬಲ (1:11)

ಒಬ್ಬ ಕ್ರೈಸ್ತನ ಬಲವು ದೇವರ ಬಲವನ್ನು ಮಾತ್ರವೇ ಒಳಗೊಂಡಿರುವದಿಲ್ಲ, ಆದರೆ ಆತನ ಬಲವನ್ನು ಸಹ ಒಳಗೊಂಡಿರುತ್ತದೆ. ಪವಿತ್ರಾತ್ಮನು ನಮ್ಮ ಬಲಹೀನತೆಯಲ್ಲಿ ನಮಗೆ ಸಹಾಯ ಮಾಡುತ್ತಾನೆ, ಆದರೆ ನಾವು ನಮ್ಮ ಪಾತ್ರವನ್ನು ಮಾಡತಕ್ಕದ್ದು. ದೇವರೇ ಎಲ್ಲವನ್ನೂ ಮಾಡಿದನೆಂದಾಗಲಿ ಅಥವಾ ತಾನೇ ಎಲ್ಲವನ್ನೂ ಮಾಡಿದನೆಂದಾಗಲಿ ಪೌಲನು ಹೇಳುವದಿಲ್ಲ. ಆತನು ಹೀಗೆ ಹೇಳುತ್ತಾನೆ, "ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಪ್ಪಿ 4:13). ಆತನು

ಕಾರ್ಯಮಾಡುವ ವೇಳೆ, ದೇವರ ಆತನ ಮೂಲಕವಾಗಿ ಕಾರ್ಯ ಮಾಡುವವನಾಗಿದ್ದನು. ನಾವು ಸಹಾಯಕ್ಕಾಗಿ ಕರ್ತನ ಮೇಲೆ ಆತುಕೊಂಡವರಾಗಿ, ನಮಗೆ ಏನು ಮಾಡಲು ಸಾಧ್ಯವೋ ಅದನ್ನು ಮಾಡತಕ್ಕದ್ದು. ಅದರ ಫಲಿತವಾಗಿ, ದೇವರು ನಮ್ಮ ಮೂಲಕ ತನ್ನ ಉದ್ದೇಶಗಳನ್ನು ನೆರವೇರಿಸುವನು. ಪೌಲನು ಹೀಗೆ ಬರೆಯುತ್ತಾನೆ, "ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟು ಮಾಡುವವನಾಗಿದ್ದಾನೆ" (ಫಿಲಿಪ್ಪಿ 2:13) ಮತ್ತು "ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ, ಬೆಳೆಸುವ ದೇವರೇ ವಿಶೇಷವಾದವನು" (1 ಕೊರಿಂಥ 3:7).

## ಯೇಸುವಿನ ಮೂಲಕ ಯೋಗ್ಯರಾಗಿ ಮಾಡಲ್ಪಟ್ಟದ್ದು (1:12-14)

ಆ ಸಹೋದರರು ಬಾಧ್ಯತೆಗೆ ಯೋಗ್ಯರಾಗಿ ಮಾಡಲ್ಪಟ್ಟಿದ್ದರೆಂಬದಕ್ಕಾಗಿ ಪೌಲನು ಕೃತಜ್ಞತೆಯನ್ನು ವ್ಯಕ್ತಪಡಿಸಿದನು (ವ. 12). ವೈದ್ಯರು, ದಂತ ವೈದ್ಯರು, ವಕೀಲರು, ಶಾಲೆಯ ಶಿಕ್ಷಕರು, ಮತ್ತು ಇನ್ನು ಅನೇಕ ವೃತ್ತಿಪರರು ತಮ್ಮ ಕೆಲಸವನ್ನು ಮಾಡುವದಕ್ಕೆ ಯೋಗ್ಯರಾಗುವ ಮುಂಚೆ ಅವರು ನಿರ್ದಿಷ್ಟವಾದ ಕೋರ್ಸ್‌ಗಳನ್ನು ಮಾಡಬೇಕಾಗಿರುತ್ತದೆ. ಈ ಯೋಗ್ಯತೆಯು ವೈಯಕ್ತಿಕ ಸಾಧನೆಯ ಮೂಲಕ ಬರುತ್ತದೆಯಾದರೂ, ಪರಲೋಕದ ಬಾಧ್ಯತೆಯ ವಿಷಯದಲ್ಲಿ ಅದು ಸತ್ಯವಾಗಿರುವದಿಲ್ಲ. ದೇವರು ನಮ್ಮಿಂದ ಬಯಸುವದೆಲ್ಲವೂ ಇಷ್ಟೇ ಏನೆಂದರೆ ಸಮರ್ಪಕವಾದ ಪ್ರತ್ಯುತ್ತರಗಳಲ್ಲಿ ಫಲಿತಗೊಳ್ಳುವಂಥ ವಿಶ್ವಾಸವನ್ನು ಆತನಲ್ಲಿಡಬೇಕು ಎಂಬದೆ (ಇಬ್ರಿಯ 5:8, 9; 11:6). ತಂದೆಯು ನಮ್ಮ ಯೋಗ್ಯತೆಯನ್ನು ಸಾಧ್ಯವಾಗಿಸಿದ್ದು ಯೇಸುವಿನ ಸಾಧನೆಯ ಮೂಲಕವಾಗಿಯೇ, ಹೊರತು ನಮ್ಮ ವೈಯಕ್ತಿಕ ಅರ್ಹತೆಯ ಮೂಲಕವಾಗಿ ಅಲ್ಲ (ಎಫೆಸ 2:8, 9).

ಬಾಧ್ಯತೆಗಾಗಿ ಯೋಗ್ಯರಾಗಿ ಮಾಡಲ್ಪಟ್ಟವರೇ ಯೇಸುವಿನ ರಾಜ್ಯದೊಳಗೆ ಸೇರಿಸಲ್ಪಟ್ಟವರಾಗಿದ್ದಾರೆ (1:13). ಕ್ರೈಸ್ತರಿಗೆ ಎರಡು ಪೌರತ್ವಗಳಿರುತ್ತವೆ: ನಾವು ಲೋಕದಲ್ಲಿದ್ದೇವೆ ಆದರೆ ಲೋಕದವರಲ್ಲ (ಯೋಹಾನ 17:11-18). ನಮ್ಮ ಎರಡು ಸ್ವದೇಶಗಳಲ್ಲಿ, ಹೆಚ್ಚು ಪ್ರಾಮುಖ್ಯವಾದದ್ದೆಂದರೆ ದೇವರ ನಿತ್ಯವಾದ, ಪರಲೋಕ ರಾಜ್ಯವಾಗಿರುತ್ತದೆ: "ನಾವಾದರೋ ಪರಲೋಕಸಂಸ್ಥಾನದವರು; ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ" (ಫಿಲಿಪ್ಪಿ 3:20). ಈ ಕಾರಣಕ್ಕಾಗಿ, ನಾವು ಆತ್ಮೀಕ ರಾಜ್ಯದ ಮಕ್ಕಳಂತೆ ಜೀವಿಸತಕ್ಕದ್ದು. ಪೇತ್ರನು ಹೀಗೆ ಬರೆಯುತ್ತಾನೆ,

> ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ (1 ಪೇತ್ರ 2:9, 10).

ಈ ಜೀವಿತವನ್ನು ತೊರೆಯುವಾಗ, ಕ್ರೈಸ್ತರು ಒಂದು ನಿತ್ಯವಾದ ಮನೆಗೆ, ನಾವು ಈಗಾಗಲೇ ಪೌರತ್ವ ಹೊಂದಿರುವ ಪರಲೋಕದ ರಾಜ್ಯಕ್ಕೆ ಹೋಗುವರು. ಈಗಿನ ಕಾಲದಲ್ಲಿ, ನಮ್ಮ ಆತ್ಮೀಕ ಸ್ವದೇಶದಿಂದ ದೂರವಾಗಿ "ಪ್ರವಾಸಿಗಳೂ ಪರದೇಶಸ್ಥರೂ" ಆಗಿರುವ ನಾವು "ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕು" (1 ಪೇತ್ರ 2:11).

ಕೊಲೊಸ್ಸೆಯವರು ತಮ್ಮ ಪಾಪಗಳಿಂದ ತಮ್ಮನ್ನು ಶುದ್ಧಪಡಿಸಿಕೊಂಡಿರಲಿಲ್ಲ ಎಂದು ಪೌಲನು ಗ್ರಹಿಸಿಕೊಂಡನು; ಯೇಸುವು ಅವರ ಕ್ಷಮಾಪಣೆಯನ್ನು ಒದಗಿಸಿದ್ದನು (ಕೊಲೊಸ್ಸೆ 1:14). ಯೇಸು ನಮ್ಮನ್ನು ತನ್ನ ವಾಕ್ಯದ ಮೂಲಕ ಶುದ್ಧ ಮಾಡುತ್ತಾನೆ. ಈ ಶುದ್ಧೀಕರಿಸುವಿಕೆಯನ್ನು ಪಡೆದುಕೊಳ್ಳಬೇಕೆಂದರೆ, ನಾವು ಆತನ"ಲ್ಲಿ" ಇರತಕ್ಕದ್ದು. ನಾವು ಕ್ಷಮಿಸಲ್ಪಟ್ಟವರು, ಪ್ರಯೋಜನವುಳ್ಳವರು, ಮತ್ತು ಆತನಿಗಾಗಿ ಫಲ ಕೊಡುವವರು ಆಗಿರಬೇಕೆಂದರೆ ಕ್ರಿಸ್ತನೊಂದಿಗಿನ ನಮ್ಮ ಸಂಬಂಧದಲ್ಲಿ ಮುಂದುವರೆಯಬೇಕು.

## ನಮ್ಮ ಬೆಳಕಿನ ರಾಜ್ಯದ ನಮ್ಮ ಬಾಧ್ಯತೆ (1:12-14)

ಕ್ರೈಸ್ತರಿಗಾಗಿರುವ ಬೆಳಕಿನ ರಾಜ್ಯದ ಬಾಧ್ಯತೆಯಲ್ಲಿ ಈಗಿನ ಜೀವನದಲ್ಲಿ ಕ್ರಿಸ್ತನ ಬೆಳಕಿನಲ್ಲಿರುವದು ಮತ್ತು ಈ ಜೀವನ ಮುಗಿದ ಬಳಿಕ ಪರಲೋಕದ ನಿರೀಕ್ಷೆಯನ್ನು ಹೊಂದಿರುವದು ಸೇರಿರುತ್ತದೆ (1 ಪೇತ್ರ 1:3, 4). ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸುವ ಮೂಲಕ ಇಂತಹ ಆಶೀರ್ವಾದಗಳಿಗೆ ನಮ್ಮನ್ನು ಯೋಗ್ಯರನ್ನಾಗಿಸಿದವನು ದೇವರೇ ಆಗಿದ್ದಾನೆ (ಕೊಲೊಸ್ಸೆ 1:13). ಒಂದು ಬಾಧ್ಯತೆಯು ಅರ್ಹತೆಯಿಂದ ಪಡೆಯುವಂಥದ್ದಾಗಲಿ ಅಥವಾ ಸಂಪಾದಿಸಿಕೊಳ್ಳಲ್ಪಡುವಂಥದ್ದಾಗಲಿ ಆಗಿರುವದಿಲ್ಲ, ಆದರೆ ಒಬ್ಬರ ಮಗುವಾಗಿರುವ ಕಾರಣದಿಂದ ಕೊಡಲ್ಪಡುವಂಥ ಸಂಗತಿಯಾಗಿದೆ. ಪರಲೋಕವನ್ನು ಬಾಧ್ಯತೆಯಾಗಿ ಹೊಂದುವವರು ದೇವರ ಮಕ್ಕಳಾಗಿರುತ್ತಾರೆ (ಗಲಾತ್ಯ 4:7), ಅವರು ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕವಾಗಿ ದೇವರ ಮಕ್ಕಳಾಗಿ ಮಾಡಲ್ಪಟ್ಟವರಾಗಿದ್ದಾರೆ (ಗಲಾತ್ಯ 3:26, 27).

1. ಕೊಲೊಸ್ಸೆಯವರನ್ನು ಅಂಧಕಾರದ ದೊರೆತನದಿಂದ ಬಿಡಿಸಿ ಕ್ರಿಸ್ತನ ರಾಜ್ಯದೊಳಗೆ ಸೇರಿಸಿದಾತನು ಎಂಬದಾಗಿ ಕೊಲೊಸ್ಸೆ 1:13, 14 ವಚನಗಳು ದೇವರನ್ನು ಮುಂದಿಡುತ್ತವೆ. ಕೊಲೊಸ್ಸೆಯವರು ತಮ್ಮನ್ನು ತಾವೇ ಬಿಡಿಸಿಕೊಂಡವರಾಗಿರಲಿಲ್ಲ. ಜನರನ್ನು ಅಂಧಕಾರದ ದೊರೆಯಾದ ಸೈತಾನನ ಹಿಡಿತಗಳಿಂದ ಬಿಡಿಸುವಾತನು ಆತನೊಬ್ಬನೇ ಆಗಿದ್ದಾನೆ.

2. ಕ್ರೈಸ್ತರು ಅಂಧಕಾರದ ದೊರೆತನದಿಂದ, ಸೈತಾನನ ಮಂಡಲದಿಂದ, ದುಷ್ಟರ ಲೋಕದಿಂದ ಬಿಡಿಸಲ್ಪಟ್ಟಿರುತ್ತಾರೆ (1 ಯೋಹಾನ 5:19). ಅವರು ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬಿಡತಕ್ಕದ್ದು (ರೋಮಾ 13:12) ಮತ್ತು ಅವುಗಳಲ್ಲಿ ಭಾಗಿಯಾಗುವದಕ್ಕೆ ನಿರಾಕರಿಸಬೇಕು (2 ಕೊರಿಂಥ 6:14; ಎಫೆಸ 5:11, 12). ಪೌಲನು ಹೀಗೆ ಬರೆಯುತ್ತಾನೆ, "ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ" (ಎಫೆಸ 5:8); ಅವರು ರಾತ್ರಿಯವರು ಮತ್ತು ಕತ್ತಲೆಯವರು ಆಗಿದ್ದರು ಆದರೆ ಈಗ "ಬೆಳಕಿನವರೂ ಹಗಲಿನವರೂ" ಆಗಿದ್ದರು (1 ಥೆಸಲೋನಿಕ 5:4, 5). ಬೆಳಕು ಮತ್ತು ಕತ್ತಲೆಯ ನಡುವಿನ ಘರ್ಷಣೆಯ ಕಾರಣದಿಂದ, ಕ್ರೈಸ್ತರು ಅಂಧಕಾರದ ಅಧಿಪತಿಯ ವಿರುದ್ಧ ನಿಲ್ಲುವದಕ್ಕಾಗಿ ದೇವರ ಸರ್ವಾಯುಧಗಳನ್ನ ಧರಿಸಿಕೊಳ್ಳಬೇಕು (ಎಫೆಸ 6:11, 12).

3. ಕತ್ತಲೆಯಲ್ಲಿ ನಡೆಯುವದರಿಂದ ದೂರವಿರಬೇಕೆಂದರೆ ಬೆಳಕಾಗಿರುವ ಯೇಸುವನ್ನು ಹಿಂಬಾಲಿಸತಕ್ಕದ್ದು (ಯೋಹಾನ 8:12). ಕೆಟ್ಟದ್ದಕ್ಕಗನುಗುಣವಾಗಿ ಜೀವಿಸುವವರು ಕತ್ತಲೆಯನ್ನು ಆನಂದಿಸುತ್ತಾರಾದ್ದರಿಂದ ಬೆಳಕನ್ನು ದ್ವೇಷಿಸುತ್ತಾರೆ (ಯೋಹಾನ 3:20). ಕತ್ತಲೆಯಲ್ಲಿರುವವರು ದೇವರೊಂದಿಗೆ ಅನ್ಯೋನ್ಯತೆ ಹೊಂದಲಾರರು, ಆದರೆ ಬೆಳಕಿನಲ್ಲಿ ನಡೆಯುವವರು ದೇವರ ಅನ್ಯೋನ್ಯತೆಯಲ್ಲಿ ಇರುವವರಾಗಿದ್ದಾರೆ (1 ಯೋಹಾನ 1:6, 7). ಇವರು ದೇವರ ಮಕ್ಕಳಾಗಿರುತ್ತಾರೆ (1 ಥೆಸಲೋನಿಕ 5:5).

4. ಕ್ರಿಸ್ತನ ರಾಜ್ಯವು ಪರಲೋಕ ಮತ್ತು ಭೂಲೋಕದ ಮೇಲೆ ಈಗಿನ ಆಳ್ವಿಕೆಯಾಗಿರುತ್ತದೆ (ಮತ್ತಾಯ 28:18), ಅದು ಆತನು ಪುನರುತ್ಥಾನಗೊಂಡು ಪರಲೋಕದ ತಂದೆಯ ಬಳಿಗೆ ಆರೋಹನಗೊಂಡ ಬಳಿಕ ಆರಂಭಗೊಂಡಿರುತ್ತದೆ (ಎಫೆಸ 1:20-23; 1 ಪೇತ್ರ 3:22). ಆತನು ಹಿಂದಿರುಗಿ ಬರುವ ತನಕ ಆತನ ಆಳ್ವಿಕೆಯು ಮುಂದುವರೆಯುವದು. ಆ ವೇಳೆಯಲ್ಲಿ ಆತನು ತನ್ನ ರಾಜ್ಯವನ್ನು ಪುನಃ ತಂದೆಯ ಕೈಗಳಿಗೆ ಒಪ್ಪಿಸುವನು (1 ಕೊರಿಂಥ 15:22-27). ಈ ಎರಡು ಅಧಿಕಾರಗಳಲ್ಲಿರುವವರ ಸ್ಥಿತಿಯು ವ್ಯತ್ಯಾಸವಾಗಿರುತ್ತದೆ:

| | *ಸೈತಾನನ ರಾಜ್ಯ* | *ಕ್ರಿಸ್ತನ ರಾಜ್ಯ* |
|---|---|---|
| ಅಪೊಸ್ತಲರ ಕೃತ್ಯಗಳು 26:18— | "ಕತ್ತಲೆಯಿಂದ" | "ಬೆಳಕು" |
| | "ಸೈತಾನನ ಅಧಿಕಾರ" | "ದೇವರು" |
| | | "ಪಾಪಗಳ ಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ" |
| 1 ಪೇತ್ರ 2:9- | | "ಆದುಕೊಂಡ ಜನಾಂಗ" |
| | | "ರಾಜವಂಶಸ್ಥರಾದ ಯಾಜಕರು" |
| | | "ಮೀಸಲಾದ ಜನ" |
| | | "ದೇವರ ಸ್ವಕೀಯ ಪ್ರಜೆ" |
| 1 ಪೇತ್ರ 2:10- | "ಪ್ರಜೆಯಲ್ಲ" | "ದೇವರ ಪ್ರಜೆ" |
| | "ವಾತ್ಸಲ್ಯವನ್ನು ಹೊಂದಿರಲಿಲ್ಲ" | "ವಾತ್ಸಲ್ಯ ಹೊಂದಿದವರಾಆಗಿದ್ದೀರಿ" |

ಅನ್ಯಜನರು ಪಾಪಗಳ ಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವವರಾಗುವಂತೆ ಅವರನ್ನು ಅಂಧಕಾರದಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ರಾಜ್ಯದೊಳಗೂ ಕರೆತರುವದೇ ಪೌಲನ ಜವಾಬ್ದಾರಿಯಾಗಿತ್ತು (ಅಪೊಸ್ತಲರ ಕೃತ್ಯಗಳು 26:18). ಹೀಗೆ, ಪಾಪಗಳು ಪರಿಹರಿಸಲ್ಪಟ್ಟಾಗ, ಜನರು

ಸೈತಾನನ ಮಂಡಲದಿಂದ ಬಿಡಿಸಲ್ಪಟ್ಟು ಯೇಸುವಿನ ರಾಜ್ಯದೊಳಗೆ ಸೇರಿಸಲ್ಪಡುತ್ತಾರೆ. ಇದು ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಿಕೊಂಡಾಗ (ಅಪೊಸ್ತಲರ ಕೃತ್ಯಗಳು 2:38; 22:16), ನೀರಿನಿಂದಲೂ ಆತ್ಮನಿಂದಲೂ ಹುಟ್ಟುವಾಗ ಸಂಭವಿಸುತ್ತದೆ (ಯೋಹಾನ 3:5; ಅಪೊಸ್ತಲರ ಕೃತ್ಯಗಳು 8:12).

ಕ್ರಿಸ್ತನಲ್ಲಿರುವವರು ಪಾಪ ಪರಿಹಾರ ಹೊಂದಿಕೊಂಡವರಾಗಿದ್ದಾರೆ (ಕೊಲೊಸ್ಸೆ 1:14). ಒಬ್ಬನು ದೀಕ್ಷಾಸ್ನಾನದ ವೇಳೆ ಸೈತಾನನ ಅಧಿಕಾರದಲ್ಲಿರುವವರನ್ನು ಕ್ರಿಸ್ತನ ರಾಜ್ಯದಿಂದ ಬೇರ್ಪಡಿಸುವ ರೇಖೆಯನ್ನು ದಾಟುವವರಾಗಿ ಕ್ರಿಸ್ತನಲ್ಲಿ ಪ್ರವೇಶಿಸುವವರಾಗಿದ್ದಾರೆ (ರೋಮಾ 6:3; ಗಲಾತ್ಯ 3:27).

## ಆನಂದದ ಮೇಲೆ ದೃಷ್ಟಿಯನ್ನಿಡುವದು (1:11, 12)

ಕ್ರೈಸ್ತರು ಯಾವುದರ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುತ್ತಾರೆ ಎಂಬುದರ ಮೇಲೆ ಆನಂದಪಡುವಿಕೆ ಮತ್ತು ಕೃತಜ್ಞತಾಸ್ತುತಿ ಮಾಡುವಿಕೆಗಳು ಅವಲಂಭಿತವಾಗಿರುತ್ತವೆ. ಹೃದಯವನ್ನು ಆನಂದದಿಂದಲೂ ಕೃತಜ್ಞತಭಾವನೆಯಿಂದಲೂ ತುಂಬಿಸುವಂತಹ ಸಂಗತಿಗಳ ಬಗ್ಗೆ ಒಬ್ಬನು ಯೋಚಿಸಬಲ್ಲನು (ಫಿಲಿಪ್ಪಿ 4:8) ಅಥವಾ ಆತನನ್ನು ದುಃಖಗೊಳಿಸುವ ಮತ್ತು ಕೃತಜ್ಞತೆಯಿಲ್ಲದವನ್ನಾಗಿ ಮಾಡುವ ಸಂಗತಿಗಳ ಬಗ್ಗೆ ಯೋಚಿಸಬಲ್ಲನು. ಆಕೆಯ ಮುದ್ದಿನ ನಾಯಿಯನ್ನು ತಂದೆಯು ಹೂಣಿಡುವದನ್ನು ಚಿಕ್ಕ ಹುಡುಗಿಯು ದುಃಖವುಳ್ಳವಳಾಗಿ ಕಿಟಕಿಯಿಂದ ನೋಡುತ್ತಾ ನಿಂತಿದ್ದಳು. ಬಳಿಕ ಆಕೆಯ ತಾಯಿಯು ಅವಳನ್ನು ಇನ್ನೊಂದು ಕಿಟಕಿಯ ಬಳಿಗೆ ಕರೆದೊಯ್ದಳು, ಅಲ್ಲಿ ಹೊರಗೆ ಇತ್ತೀಚಿಗಷ್ಟೆ ಪೂರ್ಣವಾಗಿ ಅರಳಿ ನಿಂತಿದ್ದ ಸುಂದರವಾದ ಒಂದು ಗುಲಾಬಿ ಹೂ ಇತ್ತು. ಹುಡುಗಿಯ ದುಃಖವು ಹೋಗಿ ಆಶ್ಚರ್ಯತೆ ಮತ್ತು ಆನಂದದಲ್ಲಿ ಬದಲಾಯಿತು ಯಾಕೆಂದರೆ ಆಕೆಯ ದೃಷ್ಟಿಯನ್ನು ಕೇಂದ್ರೀಕರಿಸಿದ್ದ ಸಂಗತಿಯು ಬದಲಾಗಿತ್ತು. ಕ್ರೈಸ್ತರಾಗಿ, ನಾವು ಸರಿಯಾದ ಕಾರ್ಯಗಳ ಮೇಲೆ ಆಲೋಚನೆಯನ್ನು ಮಾಡುವದಾದಲ್ಲಿ ನಾವು ಆನಂದದಿಂದ ಮತ್ತು ಕೃತಜ್ಞತಾಭಾವದಿಂದ ತುಂಬಿರಬಲ್ಲೆವು.

## ಕ್ರಿಸ್ತನ ರಾಜ್ಯದೊಳಗೆ ಸೇರಿಸಲ್ಪಡುವದು (1:13)

ರಕ್ಷಣೆ ಹೊಂದಬೇಕೆಂದರೆ, ನಾಶನದಲ್ಲಿರುವವರು ದೇವರ ವಾಕ್ಯವನ್ನು ಅಂಗೀಕರಿಸಿಕೊಳ್ಳತಕ್ಕದ್ದು, ಅದು ಉಪದೇಶಿಸುವದನ್ನು ನಂಬಬೇಕು, ಮತ್ತು ಅದಕ್ಕೆ ವಿಧೇಯರಾಗತಕ್ಕದ್ದು. ದೇವರು ನಾಶನದಲ್ಲಿರುವವರನ್ನು ತನ್ನ ಮಗನ ರಾಜ್ಯದಲ್ಲಿ ಸೇರಿಸುವ ಕ್ಷಣದ ಬಗ್ಗೆ ಪ್ರಕಟಗೊಳಿಸುತ್ತಾನೆ. ಆತನು ಹೀಗೆ ಬರೆಯುತ್ತಾನೆ, “ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು” (ಅಪೊಸ್ತಲರ ಕೃತ್ಯಗಳು 2:41). ಈ ರಕ್ಷಣೆ ಹೊಂದಿದ ಜನರನ್ನು ಸಭೆಯಲ್ಲಿ ಸೇರಿಸುತ್ತಿದ್ದಾತನು ದೇವರೇ ಆಗಿದ್ದನು: “ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು” (ಅಪೊಸ್ತಲರ ಕೃತ್ಯಗಳು 2:47b).

## ಅಡಿಟಿಪ್ಪಣಿಗಳು

[1]William Hendriksen, *Exposition of Colossians and Philemon*, New Testament Commentary (Grand Rapids, Mich.: Baker Book House, 1964), 56. [2]ನೋಡಿರಿ ರೋಮಾ 1:10; 2 ಕೊರಿಂಥ 13:7, 9; ಎಫೆಸ 1:16; ಫಿಲಿಪ್ಪಿ 1:4; 1 ಥೆಸಲೋನಿಕ 1:2; 2 ಥೆಸಲೋನಿಕ 1:11; 2 ತಿಮೊಥೆ 1:3; ಫಿಲೆಮೋನ 4. [3]ನೋಡಿರಿ ರೋಮಾ 15:30; 2 ಕೊರಿಂಥ 1:11; ಫಿಲಿಪ್ಪಿ. 1:19; 1 ಥೆಸಲೋನಿಕ 5:25; 2 ಥೆಸಲೋನಿಕ 3:1; ಫಿಲೆಮೋನ 22. [4]ನೋಡಿರಿ ಯೋಹಾನ 12:3; ಅಪೊಸ್ತಲರ ಕೃತ್ಯಗಳು 5:3; ರೋಮಾ 1:19; ಫಿಲಿಪ್ಪಿ 4:18. [5]ನೋಡಿರಿ ರೋಮಾ 6:4; 1 ಕೊರಿಂಥ 7:17; 2 ಕೊರಿಂಥ 5:7; 10:3; ಗಲಾತ್ಯ 5:16; 6:16; ಎಫೆಸ 2:10; 5:2, 8; ಕೊಲೊಸ್ಸೆ 2:6; 1 ಥೆಸಲೋನಿಕ 2:12; 4:1. [6]ನೋಡಿರಿ ರೋಮಾ 5:2; 11:20; 14:4; 1 ಕೊರಿಂಥ 15:1; 16:13; ಎಫೆಸ 6:11, 13, 14; ಫಿಲಿಪ್ಪಿ 4:1; ಕೊಲೊಸ್ಸೆ 4:12; 1 ಥೆಸಲೋನಿಕ 3:8; 2 ಥೆಸಲೋನಿಕ 2:15. [7]ಮತ್ತಾಯ 14:6; ಮಾರ್ಕ 6:22; ಅಪೊಸ್ತಲರ ಕೃತ್ಯಗಳು 6:5; ರೋಮಾ 15:1, 2; 1 ಕೊರಿಂಥ 7:33, 34; 10:33; ಗಲಾತ್ಯ 1:10; 1 ಥೆಸಲೋನಿಕ 2:4ರಲ್ಲಿ ಮನುಷ್ಯರನ್ನು ಮೆಚ್ಚಿಸುವ ಬಗ್ಗೆ ವ್ಯಕ್ತಪಡಿಸಲ್ಪಟ್ಟಿದೆ. ರೋಮಾ 8:8; 1 ಕೊರಿಂಥ 7:32; 1 ಥೆಸಲೋನಿಕ 2:4, 15; 4:1ರಲ್ಲಿ ದೇವರನ್ನು ಮೆಚ್ಚಿಸುವ ಬಗ್ಗೆ ಚರ್ಚಿಸಲಾಗಿದೆ. [8]A. T. Robertson, *Paul and the Intellectuals: The Epistle to the Colossians*, rev. and ed. W. C. Strickland (Nashville: Broadman Press, 1959), 36. [9]H. C. G. Moule, *The Epistles to the Colossians and to Philemon*, The Cambridge Bible for Schools and Colleges (Cambridge: University Press, 1893; reprint, 1902), 73. [10]*The Greek New Testament*, 4th rev. ed., ed. Barbara Aland, Kurt Aland, Johannes Karavidopoulos, Carlo M. Martini, and Bruce M. Metzger (Stuttgart: United Bible Societies, 1998).

[11]J. B. Lightfoot, *St. Paul's Epistles to the Colossians and to Philemon*, rev. (London: Macmillan & Co., 1916), 139. [12]Robert G. Bratcher and Eugene A. Nida, *A Translators Handbook on Paul's Letters to the Colossians and to Philemon*, Helps for Translators (New York: United Bible Societies, 1977), 20. [13]Moule, 76. [14]Bratcher and Nida, 20. [15]E. K. Simpson and F. F. Bruce, *Commentary on the Epistles to the Ephesians and the Colossians*, The New International Commentary on the New Testament (Grand Rapids, Mich.: Wm. B. Eerdmans Publishing Co., 1957), 191. [16]Ibid., 189–90.